


International Journal of Kannada Research
www.kannadajournal.com

**ISSN: 2454–5813**
IJKR 2018; 4(3): 158-164
© 2018 IJKR
www.kannadajournal.com
Received: 29-05-2018
Accepted: 30-06-2018

**ಮುನಿರಾಜು ಎಸ್.ವಿ**
ಸಂಶೋಧನ ವಿದ್ಯಾರ್ಥಿ, ಕನ್ನಡ ಭಾಷೆ ಮತ್ತು ಅನುವಾದ ವಿಭಾಗ, ದ್ರಾವಿಡ, ವಿಶ್ವವಿದ್ಯಾಲಯ, ಶ್ರೀನಿವಾಸವನಂ, ಕುಪ್ಪಂ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ

**Correspondence**
**ಮುನಿರಾಜು ಎಸ್.ವಿ**
ಸಂಶೋಧನ ವಿದ್ಯಾರ್ಥಿ, ಕನ್ನಡ ಭಾಷೆ ಮತ್ತು ಅನುವಾದ ವಿಭಾಗ, ದ್ರಾವಿಡ, ವಿಶ್ವವಿದ್ಯಾಲಯ, ಶ್ರೀನಿವಾಸವನಂ, ಕುಪ್ಪಂ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ

# ಸಾ.ಶಿ. ಮರುಳಯ್ಯನವರ ಕಥನ ಸಾಹಿತ್ಯದಲ್ಲಿ ವೈಚಾರಿಕತೆಯ ಒಳನೋಟ

**ಮುನಿರಾಜು ಎಸ್.ವಿ**

**ಪೀಠಿಕೆ**

ಸಾಹಿತ್ಯವು ನಿರಂತರ ಹರಿಯುವ ನೀರಿನಂತೆ ಬದಲಾವಣೆಯಾಗುತ್ತಿರುತ್ತದೆ. ಇದು ಸಾಹಿತ್ಯದ ಮುಖ್ಯ ಲಕ್ಷಣವಾಗಿದೆ. ಸಮಕಾಲೀನ ಸಮಾಜದ ಪರಿಸರ ಪ್ರೇರಣೆಗೆ ಅನುಗುಣವಾಗಿ ಸಾಹಿತಿಯ ಮನೋಧರ್ಮ ಚಿಂತನೆಯ ರೀತಿ ನೀತಿ ಬದಲಾಗುತ್ತಾ ಸಾಗುತ್ತಿರುತ್ತದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ವೈಚಾರಿಕ ಸಾಹಿತ್ಯವು ತನ್ನದೇ ಆದ ಛಾಪನ್ನು ಹೊಂದಿದೆ. ಸ್ವಾತಂತ್ರ್ಯೋತ್ತರದಲ್ಲಿ ವಿಫುಲವಾಗಿ ಬೆಳೆದಿದ್ದು, ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ. ಸಮಾಜದಲ್ಲಿನ ಶೋಷಣೆಯನ್ನು ಹೋಗಲಾಡಿಸಲು ಹಲವಾರು ಮಹನೀಯರು ಅವಿರತವಾಗಿ ಪ್ರಯತ್ನಿಸಿದ್ದಾರೆ. ಸಮಾಜದಲ್ಲಿನ ಶೋಷಣೆಯನ್ನು ಕಿತ್ತೊಗೆಯಲು ಜನತೆಯ ಮನೋಧರ್ಮ ಹಾಗೂ ಹೊಸಬಗೆಯ ಆಲೋಚನಾ ಕ್ರಮಗಳು ಮುಖ್ಯವಾಗುತ್ತವೆ. ಹಾಗೂ ವೈಚಾರಿಕತೆಯು ಮನುಷ್ಯನ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾದುದಾಗಿದೆ. ಸಾ. ಶಿ. ಮರುಳಯ್ಯನವರ ವಿಚಾರಧಾರೆಗಳು ಹಳೆಯದರ ಆಧಾರದ ಮೇಲೆ ಹೊಸತನ್ನು ನಿರ್ಮಿಸುವ ವಿಶಾಲ ಹೃದಯಗಳ ಅಗತ್ಯತೆಯನ್ನು ಒತ್ತಿ ಹೇಳುತ್ತವೆ. ಸಮಾನತೆಯ ಅಂಶಗಳನ್ನು ಸಾಧಿಸಲು ವಿಚಾರ ಸ್ವಾತಂತ್ರ್ಯ ಬೆಳೆಯಬೇಕಾಗಿದೆ.

ಸಾಹಿತ್ಯವು ಆಯಾಯ ಕಾಲ ಸಂದರ್ಭದ ಪ್ರೇರಣೆ ಪ್ರಭಾವಗಳಿಗೆ ಒಳಗಾಗುತ್ತಲೇ ತನ್ನ ಅಭಿವ್ಯಕ್ತಿಯ ಸಾಧ್ಯತೆಗಳನ್ನು ಕಂಡು ಕೊಂಡಿರುತ್ತದೆ. ಈ ಅಭಿವ್ಯಕ್ತಿಯು ಎಲ್ಲ ಕಾಲ ಸಂದರ್ಭಕ್ಕೂ ಎಲ್ಲ ಬರಹಗಾರರಲ್ಲೂ ಒಂದೇ ಆಗಿರಲು ಸಾಧ್ಯವಿಲ್ಲ. ಬರಹಗಾರನ ತಾತ್ವಿಕ ನಿಲುವು ಬದ್ಧತೆಗಳು ಆ ಕಾಲ ಸಂದರ್ಭದ ತುರ್ತು ಅಭಿವ್ಯಕ್ತಿಯ ಸಾಧ್ಯತೆಗಳನ್ನು ನಿರ್ಧರಿಸುತ್ತವೆ. ಆಧುನಿಕ ಕನ್ನಡ ಸಾಹಿತ್ಯ ಆರಂಭದ ಘಟ್ಟದಲ್ಲಿ ಪರಂಪರೆ ಹಾಗೂ ವರ್ತಮಾನದ ಸಂಗತಿಗಳನ್ನು ಧರ್ಮ ಕೇಂದ್ರಿತ ನೆಲೆಯಿಂದಲೇ ಅರ್ಥ ಮಾಡಿಕೊಂಡಿತು. ವೈಜ್ಞಾನಿಕ ನೆಲೆಗಟ್ಟಿನಲ್ಲಿ ಭಾವಪ್ರಧಾನವಾದ ನೋಟ ಆವಿಷ್ಕಾರಗೊಂಡುದರ ಪರಿಣಾಮವಾಗಿ ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯವು ವಿಭಿನ್ನತೆಯನ್ನು ಹೊಂದಿದ್ದು ಸಮಾಜದ ನೋಟಗಳನ್ನು ಅತ್ಯಂತ ವೈಚಾರಿಕ ನೆಲೆಯಿಂದ ನೋಡುವ ಹೊಸ ದೃಷ್ಟಿಕೋನವೊಂದು ಬೆಳೆಯಿತು. ಸಾಹಿತ್ಯವು ಮೊದಲಿಗೆ ಸಾಮಾಜಿಕ ಪರಿಭಾಷೆಯಲ್ಲಿ ಪ್ರತಿಕ್ರಿಯಿಸಿತು. ಸ್ವಾತಂತ್ರ್ಯ ಸಮಾನತೆಯ ಸಮಾಜವನ್ನು ಸ್ಥಾಪಿಸುವ ಉದ್ದೇಶಗಳನ್ನು ಪ್ರಕಟಿಸುತ್ತಾ ಆಧುನಿಕ ಕನ್ನಡ ಸಾಹಿತ್ಯವು ಸಮಾಜಮುಖಿ ಚಿಂತನೆಗೆ ಒತ್ತು ನೀಡಿತ್ತು. ಕಳೆದ ಶತಮಾನದ ಆರಂಭದಿಂದ ದಶಕಗಳಿಂದಲೂ ಸಾಹಿತ್ಯದ ಉದ್ದೇಶಗಳು ಸಾಮಾಜಿಕವಾದದ್ದಾಗಿದ್ದು, ಸಮಾಜವನ್ನು ಅರ್ಥ ಮಾಡಿಕೊಳ್ಳುವ ಹೊಸ ಸಾಧ್ಯತೆಗಳು, ಹೊಸ ಸಮಾಜದ ಪರಿಕಲ್ಪನೆಗಳು ಸಾಹಿತ್ಯದ ಮುಖ್ಯವಾಹಿನಿಯಲ್ಲಿ ಕಂಡುಬಂದು ಅಸಮಾನತೆಗಳನ್ನು ಅತ್ಯಂತ ವೈಚಾರಿಕವಾಗಿ ಪ್ರಶ್ನಿಸುವುದರ ಮೂಲಕ ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವ್ಯವಸ್ಥೆಯ ಹಕ್ಕೊತ್ತಾಯಗಳು ಸಾಹಿತ್ಯದ ಮುಖ್ಯ ಕಾಳಜಿಯಾಗಿ ಕಾಣಿಸಿಕೊಂಡಿರುವುದನ್ನು ಕಾಣಬಹುದು. ತನ್ನ ಕಾಲ ಸಂದರ್ಭದ ಸಾಮಾಜಿಕ ಸ್ಥಿತ್ಯಂತರಗಳಿಗೆ ಕಾರಣವಾದ ಬರಹಗಾರನ ಸಾಮಾಜಿಕ ಚಿಂತನೆಗಳು ಅವನ ಕೃತಿಗಳಲ್ಲಿ ಕಾಣಿಸಿಕೊಳ್ಳಲು ಸಾಧ್ಯ. ಸಾಶಿಮರವರ ಚಿಂತನೆಗಳು ಕೃತಿ ರೂಪದಲ್ಲಿ ಮೂಡಿದ್ದು ಮುಖ್ಯವಾಗಿ ಪೂರಕವಾದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕಾರಣಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಆಯಾ ಕಾಲದ.

ಸಂದರ್ಭದ ಪ್ರೇರಣೆ ಪ್ರಭಾವ, ಜೀವನ ಗ್ರಹಿಕೆ, ನಂಬಿಕೆ, ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳು ಅಭಿವ್ಯಕ್ತಿ ಸಾಧ್ಯತೆಗಳನ್ನು ನಿರ್ಧರಿಸುತ್ತಾ ಬಂದಿದೆ.

ಕನ್ನಡದ ಖ್ಯಾತಕವಿ – ವಿಮರ್ಶಕರೂ ಶ್ರೇಷ್ಠ ವಿದ್ವಾಂಸರು, ಜನಪ್ರಿಯ ವಾಗ್ಮಿಗಳು, ಸಮರ್ಥ ಪ್ರಾಧ್ಯಾಪಕರೂ ಆದ ಸಾ.ಶಿ.ಮರುಳಯ್ಯನವರು ಕನ್ನಡನಾಡಿನ ಉದ್ದಗಲಕ್ಕೂ ಹೆಸರು ಗಳಿಸಿರುವ ಪ್ರಖ್ಯಾತ ಸಾಹಿತಿಗಳು. ಇವರು ಜನವರಿ ೨೮, ೧೯೩೧ರಲ್ಲಿ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ಸಾಸಲು ಗ್ರಾಮದಲ್ಲಿ ಶ್ರೀಮತಿ ಸಿದ್ಧಮ್ಮ ಮತ್ತು ಶ್ರೀ ಶಿವರುದ್ರಯ್ಯನವರ ಜೇಷ್ಠ ಪುತ್ರನಾಗಿ ಜನಿಸಿದರು. ಶಾಂತಮೂರ್ತಿ ಎಂಬುವ ಒಬ್ಬನೇ ಒಬ್ಬ ಸಹೋದರನನ್ನು ಹೊಂದಿರುವ ಮರುಳಯ್ಯನವರು, "ಶಾಂತಮೂರ್ತಿ ಹೆಸರಿಗೆ ತಕ್ಕ ಶಾಂತ ಸ್ವಭಾವದವರು. ನಾನಂತೂ ಮರುಳ, ದುರುಳನಲ್ಲ. ಆದರೆ, ಅರೆ ಮರುಳ"[೧] ಎನ್ನುತ್ತಾರೆ.

ಸಾ.ಶಿ.ಮ ರವರ ಹುಟ್ಟೂರು ಒಂದು ಕುಗ್ರಾಮ ಹಳ್ಳಿಯಲ್ಲಿ ಸಾಮಾನ್ಯವಾಗಿ ಎಲ್ಲರೂ ಹೊಲ–ಗದ್ದೆಗಳಲ್ಲಿ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದ ರೈತರು, ಗ್ರಾಮದ ಸುತ್ತಮುತ್ತ ಹಚ್ಚಹಸಿರಿಗಿಂದ ಕಂಗೊಳಿಸುವ ತೆಂಗಿನ ತೋಟಗಳು, ಹೊಲಗದ್ದೆಗಳಲ್ಲಿ ಬೆಳೆದು ನಿಂತ ರಾಗಿ, ಜೋಳ ಪ್ರಕೃತಿ ಸೌಂದರ್ಯವನ್ನು ಹೆಚ್ಚಿಸುತ್ತಿದ್ದವು. ಇವೆಲ್ಲವೂ ಬಾಲಕ ಮರುಳಯ್ಯನಲ್ಲಿ ಅಗಾಧವಾದ ಪ್ರಭಾವವನ್ನು ಬೀರಿ ಉತ್ತಮ ಕೃತಿಗಳನ್ನು ರಚಿಸಲು ಕಾರಣವಾಗಿರಬಹುದು. "ಅವರ ಮನೆಯಲ್ಲಿ ಸಾಹಿತ್ಯದ ವಾತಾವರಣವೂ ಇತ್ತಾದ್ದರಿಂದ ಮರುಳಯ್ಯನವರಿಗೆ ಅಧ್ಯಾಪನ ಲೇಖನಗಳೆರಡರಲ್ಲೂ ಸಹಜವಾದ ಆಸಕ್ತಿ ಮೊದಲಿನಿಂದಲೇ ಮೂಡಿತು"[೨]

ಸಾ.ಶಿ.ಮರುಳಯ್ಯನವರು ಪ್ರಮುಖ ಕವಿಗಳು ಇವರ ಕೃತಿಗಳಲ್ಲಿ ನಿಸರ್ಗ ಪ್ರೇಮ, ಆಧ್ಯಾತ್ಮ ಸಾಮಾಜಿಕ ಚಿಂತನೆ ಮುಂತಾದ ವಿಷಯಗಳು ಅನಾವರಣಗೊಂಡಿವೆ. ಜೊತೆಗೆ ಆಗಿನ ಸ್ವಾತಂತ್ರ್ಯದ ಹಂಬಲ ಇವರ ಬರಹದ ವಸ್ತುವಾಯಿತು. ಗಾಂಧಿಜೀಯವರ ತತ್ವ ವಿಚಾರಗಳು ಜನ ಜಾಗೃತಿಗಾಗಿ ದೇಶಪ್ರೇಮ ನಾಡುನುಡಿಯ ಬಗ್ಗೆ ಅಭಿಮಾನ ಮೂಡಿಸುವಂತಹ ವಿಚಾರಪರ ಅಂಶಗಳು ಸೇರಿ ಇವರ ಸಾಹಿತ್ಯ ರಚನೆಗೊಂಡಿದೆ. ಈ ಸಾಲಿಗೆ ಸೇರುವ ಕವಿ ಸಾ. ಶಿ. ಮರುಳಯ್ಯನವರ ಕೃತಿಗಳ ವಸ್ತು ಮತ್ತು ವಿಚಾರಗಳು ವಿಭಿನ್ನವಾದವು ಅವುಗಳನ್ನು ಕುರಿತ ಈ ಅಧ್ಯಯನ ಕುತೂಹಲಕಾರಿಯಾದ್ದು.

**ಕಾದಂಬರಿಗಳು**

ಹೊಸ ಶಿಕ್ಷಣದ ಆಧುನಿಕ ಪ್ರವೇಶಗಳಲ್ಲಿ ಕಾದಂಬರಿಯೂ ಒಂದು. ಕಾದಂಬರಿ ಎಂಬುದು ಕಥನಕ್ಕಿಂತ ಭಿನ್ನವಾಗಿರಬೇಕೆಂಬ ಅರಿವು ಕೃತಿಕಾರರಲ್ಲಿ ಇದ್ದಂತೆ ಕಾಣುತ್ತದೆ. ಕಾದಂಬರಿಯ ಹುಟ್ಟಿಗೆ ಕಾರಣವಾದ ಅಂಶಗಳಲ್ಲಿ ಗದ್ಯದ ಬಹುರೂಪಿ ಬಳಕೆಯೂ ಒಂದಾಗಿದೆ. ಇಂದಿಗೆ ಅದರ ಅವಶ್ಯಕತೆಯು ಹೆಚ್ಚಾಗಿದೆ ಎನ್ನಬಹುದು. ವೈಚಾರಿಕತೆ ಮತ್ತು ಭಾವುಕತೆಗಳ ನಡುವಿನ ಮಧ್ಯಮ ಮಾರ್ಗವನ್ನು ಅನುಸರಿಸಿರುವ ಚೈತನ್ಯಶಾಲಿಗಳು ತಮ್ಮೆಲ್ಲಾ ಇತಿಮಿತಿಗಳ ಇಕ್ಕಟ್ಟಿನಲ್ಲಿಯೇ ತುಂಬು ಪ್ರಾಮಾಣಿಕರಾಗಿದ್ದು ಸತ್ಯಕ್ಕೆ ಸಮೀಪವಾದ ತಮ್ಮ ಸರಳವಾದ ನೈತಿಕ ಧೈರ್ಯದ ಬದುಕು ನೀಡುವ ಅಪರಿಮಿತವಾದ ಆನಂದಕ್ಕೆ ಬೆರಗಾದವರು ತುಂಬಾ ಶಕ್ತಿಯುತವಾದ ಪ್ರಜಾಪ್ರಭುತ್ವ ವ್ಯವಸ್ಥೆಯ ಚೌಕಟ್ಟಿನಲ್ಲಿ ಸಕಲರು ಸಕಲರ ಒಳಿತಿಗಾಗಿ ಅರ್ಪಿಸಿಕೊಳ್ಳುವುದರ ಮೂಲಕವೇ ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕೆನ್ನುವ ಅದಮ್ಯ ಹಂಬಲವನ್ನು ಹೊಂದಿದ್ದು ಅದನ್ನು ಸಾಹಿತ್ಯದ ಮೂಲಕ ಹೊರಹಾಕಿದರು ಎಂದೇ ಹೇಳಬಹುದು.

ವೈಚಾರಿಕತೆಯು, ಹಿರಿಮೆಯನ್ನು ನಿರ್ಧರಿಸುವ ಮಹತ್ವದ ಸಂಗತಿಗಳಲ್ಲಿ ಒಂದು ಉತ್ತಮ ಅನುಭವ ಪ್ರಪಂಚ ಹಾಗೂ ಬದುಕಿನ ಬಗೆಗೆ ನಮಗಿರುವ ಪ್ರಜ್ಞೆಯನ್ನು ವಿಸ್ತರಿಸಲು ಅನುವಾಗುತ್ತದೆ. ಇದು ಹೊಸದೊಂದು ದೃಷ್ಟಿಕೋನವೊಂದರ ಸಾಧ್ಯತೆಯನ್ನು ಬಿಂಬಿಸಲು, ನಿರೀಕ್ಷಣಾ ಸಾಮರ್ಥ್ಯವನ್ನು ಅರಿವುಗೊಳಿಸಲು ಸಾಧ್ಯವಾಗುವುದು. ತಾನು ಚಿತ್ರಿಸುತ್ತಿರುವ ಅನುಭವದಲ್ಲಿ ಈ ಹಿಂದೆ ಗಮನಕ್ಕೆ ಬಾರದೆ ಉಳಿದಿದ್ದ ಜೀವನದ ಮೂಲಭೂತ ಸಮಸ್ಯೆಗಳ ಅಂತರಿಕ ತೊಡಕುಗಳ ಬಗ್ಗೆ ಇರುವ ಆಳವಾದ ತಿಳಿವಳಿಕೆಯು ಕೃತಿಕಾರನ ವೈಚಾರಿಕತೆಯ ರೂಪದಲ್ಲಿ ಮೂಡುತ್ತದೆ. ಬದುಕಿನ ಮೂಲಭೂತ ಸಮಸ್ಯೆಗಳ ಆಳವಾದ ತಿಳಿವಳಿಕೆಯಿಂದ ಹೊರಡುವ ಲೇಖಕ ಬದುಕಿನ ಅನುಭವದ ಸ್ವೀಕಾರ ಹಾಗೂ ಆಯ್ಕೆಗಳನ್ನು ಲೇಖಕನ ವೈಚಾರಿಕತೆ ನಿಯಂತ್ರಿಸುತ್ತದೆ. ಲೇಖಕನ ಜೀವನ ದೃಷ್ಟಿಯಲ್ಲಿ ಅರ್ಥಪೂರ್ಣತೆಯನ್ನು ಒಳಗೊಂಡ ಒಂದು ಅನುಭವ ಸಾಹಿತ್ಯದಲ್ಲಿ ಸ್ಥಾನ ಪಡೆಯಲು, ಇಂತಹ ಅನುಭವಗಳ ಆಯ್ಕೆಯಲ್ಲಿ ವ್ಯವಸ್ಥೆಯಲ್ಲಿ ಕೂಡ ವೈಚಾರಿಕತೆ ಮಹತ್ವದ ಪಾತ್ರ ವಹಿಸುತ್ತದೆ. ಹೀಗೆ ಲೇಖಕನ ವೈಚಾರಿಕತೆಯಲ್ಲಿ ಸ್ವಂತಿಕೆ ಅರ್ಥಪೂರ್ಣತೆ ಆಳ ಅನುಭವದ ಮೇಲೆ ಆ ಮೂಲಕ ಕೃತಿಯ ಯಶಸ್ಸಿನ ಮೇಲೆ ಪರಿಣಾಮ ಬೀರಬಲ್ಲವು ಎಂದರೆ ಲೇಖಕನ ವೈಚಾರಿಕತೆಯ ಮಹತ್ವವೇ ಆಗಿದೆ ಎನ್ನಬಹುದು. ಆದರೆ, ಇಲ್ಲಿ ಸಾ. ಶಿ. ಮರವರ ವೈಚಾರಿಕತೆ ಕಾದಂಬರಿಯ ವಸ್ತುವಿಗೆ ಸಂಬಂಧಿಸಿದ ಚಿಂತನೆಯಾಗಿದೆ ಎಂಬುದನ್ನು ಗಮನಿಸುವುದು ಅವಶ್ಯಕವಾಗಿದೆ.

ಮನುಷ್ಯ ಜೀವನದ ನಡವಳಿಕೆಗಳಲ್ಲಿ ನಾಗರೀಕತೆ ಸಂಸ್ಕೃತಿಗಳು ಕಾಲದಿಂದ ಕಾಲಕ್ಕೆ ಪರಿಷ್ಕೃತ ರೂಪದಿಂದ ಮೂಡಿದವುಗಳಾಗಿವೆ. ಆ ಕಾಲದಿಂದಲೂ ಮನುಷ್ಯ ಜೀವನ ಶಿಸ್ತುಗಳನ್ನು ರೂಪಿಸಿಕೊಳ್ಳುವಲ್ಲಿ ಅನೇಕ ಆವಿಷ್ಕಾರಗಳನ್ನು ಮಾಡಿಕೊಂಡಿದ್ದಾನೆ. ಮನುಕುಲದ ರಕ್ಷಣೆ ಪರಂಪರೆಯನ್ನು ಸಾಹಿತ್ಯಿಕ ಕೃತಿಗಳಲ್ಲಿ ಇತಿಹಾಸವನ್ನು ಸೇರಿಕೊಂಡು ಇಲ್ಲಿ ಮಾಡಿರುವ ಚಿತ್ರಣಗಳು ಒಳಿತಾಗಲಿ, ಕೆಡುಕಾಗಲಿ ಅವು ಇಂದಿನ ಜೀವನ ದರ್ಶನಕ್ಕೆ ಮುಖಾಮುಖಿಯಾಗಿಸಿಕೊಳ್ಳುವ ಅನಿವಾರ್ಯತೆ ಇದೆ.

ಸಾ.ಶಿ.ಮರುಳಯ್ಯನವರು ರಚಿಸಿರುವ ರಾಣಾಪ್ರತಾಪ ಕಾದಂಬರಿಯು ಐತಿಹಾಸಿಕ ವಸ್ತುವುಳ್ಳದ್ದಾಗಿದೆ. ಮೇವಾಡದ ಮಹಾಮಂಡಲೇಶ್ವರನಾದ ರಾಣಾಪ್ರತಾಪನು ಹುಟ್ಟು ಹೋರಾಟಗಾರ. ದೆಹಲಿಯ ಕುತಂತ್ರ ಸನ್ನಾಹ ಹಾಗೂ ಆಮಿಷಗಳಿಗೆ ಬಲಿಯಾಗದೆ ಹೋರಾಟ ಮಾಡುತ್ತಾನೆ. ಕೊನೆಗೂ ಸೋತಂತೆ ಕಾಣುವ ಪ್ರತಾಪನು ದೆಹಲಿಯ ದೊರೆಗೆ ಶರಣಾಗುವ ಪತ್ರವನ್ನು ರವಾನಿಸುತ್ತಾನೆ. ಈ ವಿಷಯ ತಿಳಿದ ಧೀರ ರಜಪೂತರ ಮನಸ್ಸುಗಳು ವಿಹ್ವಲಗೊಳ್ಳುತ್ತದೆ. ಪೃಥ್ವಿಸಿಂಹನಂತೂ ಅವನಿಗೊಂದು ಪತ್ರ ಬರೆದು ಅವನ ವೀರತನದ ಹಾಗೂ ರಾಜಸ್ಥಾನದ ಮಣ್ಣಿನ ಗುಣವನ್ನು ಅರುಹಿದಾಗ ತಪ್ಪಿನ ಅರಿವಾಗಿ ಪ್ರತಾಪಸಿಂಹ ಹೋರಾಟಕ್ಕಿಳಿಯುತ್ತಾನೆ. ಆ ಹೊತ್ತಿಗೆ ಕಾಲ ಮಿಂಚಿದ್ದರೂ ರಜಪೂತ ಸಾಮ್ರಾಜ್ಯ ಅನ್ಯರ ವಶವಾಗದಂತೆ ಎಚ್ಚರವಹಿಸುತ್ತಾನೆ. ಈ ಐತಿಹಾಸಿಕ ವಸ್ತುವಿನೊಂದಿಗೆ ಶೃಂಗಾರ, ವಿರಹ, ಪ್ರಣಯ, ರಾಜಕಾರಣ, ಯುದ್ಧ ವ್ಯಯ ಆಕಾಂಕ್ಷೆಗಳನ್ನು ಯಥೇಚ್ಛವಾಗಿ ಧಾರೆಯೆರೆದಿದ್ದಾರೆ. ನಾ. ಡಿಸೋಜರವರ ಮಾತಿನಲ್ಲಿ ಹೇಳುವುದಾದರೆ "ಚರಿತ್ರೆಯ ಪುಟಗಳಲ್ಲಿ ನಾವು ಕೇಳಿದ ರಾಣಾ ಪ್ರತಾಪನ ಕಥೆ ಇಲ್ಲಿ ವಿವರವಾಗಿ ಬಂದಿದೆ. ಅಂದಿನ ಜನ ಜೀವನ, ಆಚಾರ ವಿಚಾರಗಳನ್ನು ಚಿತ್ರಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಪುಸ್ತಕ ಓದಿ ಬದಿಗಿರಿಸಿದಾಗಲೂ ಮಾವಾಡರ ಸುತ್ತಲೂ ಆ ಕಾಡು. ಕುದುರೆಗಳ ಖುರಪುಟದಿಂದ ಯುದ್ಧ,

ಕೋಲಾಹಲ ಮನಸ್ಸಿನಲ್ಲಿ ಉಳಿದಿರುತ್ತದೆ. ಹಾಗೆಯೇ ರಾಣಾ, ಶಕ್ತಿ ಬಿಜಲಿಯ ವ್ಯಕ್ತಿತ್ವ"[೩] ದೇಶ ಭಕ್ತನೊಬ್ಬನ, ಪ್ರಜಾಪಿತನೊಬ್ಬನ ಮನಸನ್ನು ಹೊಕಿದೆ ಎಂದಿದ್ದಾರೆ. ಇಂದಿನ ಜನಮಾನಸದಲ್ಲಿ ತಾಯಿನಾಡು, ನುಡಿ ಸೇವೆ, ಮಣ್ಣಿನ ಮಮತೆಯನ್ನು ಪ್ರತಿಯೊಬ್ಬ ಪ್ರಜೆಯು ಒಳಗೊಳ್ಳಬೇಕೆಂಬ ಸಂದೇಶವನ್ನು ಸಾ. ಶಿ. ಮರುಳಯ್ಯನವರು ರಾಣಾಪ್ರತಾಪನ ವ್ಯಕ್ತಿತ್ವದ ಮೂಲಕ ತಿಳಿಸಿದ್ದಾರೆ.

"ಯಾವುದು ಅವರ ಮನಸ್ಸನ್ನು ಅರಳಿಸಿತೋ ಕುತೂಹಲವನ್ನು ಕೆರಳಿಸಿತೋ ಅವೆಲ್ಲಾ ಬರಹವಾಗಿ ಪರಿಣಮಿಸಿದೆ. ಸಾಹಿತಿಯಾದವನ ಮೊದನೆಯ ಕೆಲಸವೆಂದರೆ, ಆದಷ್ಟು ಪ್ರಾಮಾಣಿಕವಾಗಿ ಸುತ್ತಣ ಸಮಾಜವನ್ನು, ಅದು ಒಳಗೊಂಡಿರುವ ಜನಗಳನ್ನು ಅವರ ಬದುಕಿನ ಬಗೆಯನ್ನು ತಿಳಿಯುವುದು"[೪] ಹಾಗಾಗಿ ಅವರ ಕಾದಂಬರಿಗಳು ಬದುಕಿನ ಹಸಿ ಹಸಿ ಚಿತ್ರಗಳನ್ನು ತೆರೆದಿಡುತ್ತವೆ. ಇಂತಹ ಸೃಜನಾತ್ಮಕ ವಾಸ್ತವ ಚಿತ್ರಣಗಳು ಅವರ ಕಾದಂಬರಿಗಳ ವಸ್ತು ವಾಸ್ತವ ಜೀವನಕ್ಕೆ ತೀರಾ ಹತ್ತಿರವಾಗಿದ್ದು, ಮನುಷ್ಯ ಸ್ವಭಾವ ಹಾಗೂ ಮಾನವ ಸಂಬಂಧದ ಮೂಲರೂಪಗಳ ಮಾದರಿಗಳನ್ನು ಒದಗಿಸುತ್ತವೆ. ಮನುಷ್ಯ ಸಹಜ ಹಂಬಲ, ತೊಳಲಾಟ, ಅನಿಸಿಕೆ, ಭಾವನೆ, ದ್ವಂದ್ವ, ಸಂಘರ್ಷ, ನೋವು–ನಲಿವು, ತಿರಸ್ಕಾರ, ಕನಸು ಇತ್ಯಾದಿಗಳ ಮೂಲಕ ಬೃಹದಾಕಾರವಾಗಿ ಬೆಳೆಯುವ ಪಾತ್ರಗಳ ಹಾಗೂ ಸನ್ನಿವೇಶಗಳ ಮಾನಸಿಕ ತುಮುಲಗಳಿಗೆ ಕಾರಣವನ್ನು ಒದಗಿಸುತ್ತವೆ.

ನಾವು ವಿಚಾರವಂತರಾದಾಗ ಮಾತ್ರ ಸಮಾಜ ಪ್ರಗತಿ ಪಥದಲ್ಲಿ ಮುನ್ನಡೆಯಲು ಸಾಧ್ಯ. ಇಲ್ಲವಾದಲ್ಲಿ ಉಳ್ಳವರು ಇಲ್ಲದವರ ಮೇಲೆ ನಡೆಸುವ ಆಕ್ರಮಣಗಳಿಗೆ ನಿರ್ಬಂಧ ಹಾಗೂ ಶೋಷಿತರ ಪರ ಸಮರ್ಪಕವಾಗಿ ಶ್ರಮಿಸುವಲ್ಲಿ ನಡೆಯುವಂತಾಗುತ್ತದೆ. ಸಮಾಜದಲ್ಲಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಸ್ಥಿತ್ಯಂತರಗಳು ಅಂತೆಯೇ ಮೌಢ್ಯ, ಮೂಢನಂಬಿಕೆಗಳು, ಸ್ತ್ರೀ ಶೋಷಣೆ ಬಡವರ ಮೇಲಿನ ಆಕ್ರಮಣ, ಕೀಳರಿಮೆ, ಲಿಂಗಭೇಧ, ಜಾತಿಪದ್ದತಿ, ವರ್ಗವ್ಯವಸ್ಥೆ, ವರ್ಣವ್ಯವಸ್ಥೆಯ ಅಂತ್ಯದ ಬಗ್ಗೆ ಸಾ.ಶಿ.ಮರವರ ಕೃತಿಗಳಲ್ಲಿ ಏಕ ರೀತಿ ವ್ಯಕ್ತವಾಗಿದೆ. "ಎಲ್ಲದರ ಅಂತ್ಯಕ್ಕೂ ಹೊಸೆದುಕೊಂಡೇ ಇಹುದು ಹೊಸತೊಂದು ನಾಂದಿ!"[೫] ದೈವ ಧರ್ಮದ ಬಗೆಗಿನ ಅನಿಸಿಕೆಗಳು ಜನರ ದಾರುಣ ಬದುಕಿನ ಚಿತ್ರಣದ ಮೂಲಕ ನವಸಮಾಜವೊಂದನ್ನು ಕಟ್ಟಬೇಕಾಗಿರುವುದು ಅತ್ಯವಶ್ಯಕ ಹಾಗೇಯೇ ಪ್ರಸ್ತುತದಲ್ಲಿನ ಕೋಮುವಾದ, ಅಸಮಾನತೆ, ಸೋಲು, ಕ್ರೌರ್ಯ, ದ್ವೇಷಾಸೂಯೆ, ಮನೋಧಿಕಾರ ಮುಂತಾದ ಆಗುಹೋಗುಗಳು ನಮ್ಮ ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡಿವೆ. ಭಾರತೀಯರ ಜೀವನದಲ್ಲಿ ಅಂತ:ಸತ್ವವಾಗಿ ಪುಟಿದೆದ್ದ ಧರ್ಮವು ಮಾನವನನ್ನು, ಮಾನವ ಸಮಾಜವನ್ನು ಪರಿಪೂರ್ಣತೆಯಡೆಗೆ ಕೊಂಡೊಯ್ಯುವ, ಎತ್ತಿ ಹಿಡಿಯುವ, ಪೋಷಿಸುವ, ಪ್ರಚೋದಿಸುವ, ಧಾರಣ ಮಾಡುವ ಆಂತರಿಕ ಶಕ್ತಿಯಾಗಿದೆ. ಯಾವ ಅಂತ: ಸಾಕ್ಷಿಯ ಪ್ರಜ್ಞೆ ಅಥವಾ ಜಾಗೃತಿಯಿಂದ ಮನುಷ್ಯ ತನ್ನೆಲ್ಲ ಬಾಲಿಕ ಮತ್ತು ಭಾವುಕ ವಿಚಾರಗಳಿಂದ ಹೊರಬಂದು, ಹೊರಪ್ರಲೋಭನೆಗಳಿಗೆ ಮಾರು ಹೋಗದಂತೆ ನೀತಿಯುತವಾಗಿ ನಡೆಸುತ್ತ, ಮಾನವೀಯತೆಯೆಡೆಗೆ ನಡೆಯಿಸುವ ಚೈತನ್ಯಶಕ್ತಿಯೇ ಧರ್ಮವಾಗಿದೆ.

ಆಗಾಗಿಯೇ ನಾಗನೂರು ಶ್ರೀ ಶಿವಬಸವಸ್ವಾಮಿಗಳ ಕಾಯಕ ಧರ್ಮವನ್ನು, ಪ್ರಸಾದ ಸೇವೆಯನ್ನು, ನುಡಿಸೇವೆಯನ್ನಿಟ್ಟುಕೊಂಡು ಸಾ.ಶಿ. ಮರುಳಯ್ಯನವರು 'ಮಹಾಪ್ರಸಾದಿ' ಎಂಬ ಕಾದಂಬರಿಯನ್ನು ರಚಿಸಿದ್ದಾರೆ. ಇದರಲ್ಲಿ ಕಾಲ್ಪನಿಕತೆಗಿಂತ ವಾಸ್ತವಿಕತೆಯೇ ಎದ್ದು ಕಾಣುತ್ತದೆ. ಶ್ರೀ ಶಿವಬಸವಸ್ವಾಮಿಗಳವರದು ತುಂಬಿದ ಕೊಡದಂತಹ ಗಾಂಭೀರ್ಯ ಮತ್ತು ರತ್ನಗಳನ್ನು ಗರ್ಭೀಕರಿಸಿಕೊಂಡಿರುವ ಸಮುದ್ರದಂತಹ ವ್ಯಕ್ತಿತ್ವ ಇವರ ಸೇನೆಗೆ ಸಾವಿರ ತೋಳುಗಳು! "ಇಂತಹ ಸೇವಾಮೂರ್ತಿಯ ಬಣ್ಣನೆಗೆ ಆದಿಶೇಷನ ಸಾವಿರ ನಾಲಗೆಗಳು ಸಾಲವು ಆದರೂ ಒಂದು ನಾಲಗೆಯಳ್ಳ ಸಾ.ಶಿ.ಮ ಅವರು ಹಲವು ರಾಗಗಳೆಲ್ಲ ಹಾಡಿದ್ದಾರೆ" ಎನ್ನುವ ಸಿ. ವಿ. ಜಮಖಂಡಿಮಠ ಹಾಗೂ ಜಿ.ಎಂ.ಹಿರೇಮಠರ ಮಾತುಗಳು ನಿಜಕ್ಕೂ ಅರ್ಥಪೂರ್ಣ ಎನ್ನಿಸುತ್ತದೆ. ಧರ್ಮ ಅವನತಿಗೊಂಡರೆ ಸಮಾಜದ ಏಳ್ಗೆ ಸಾಧ್ಯವಿಲ್ಲ ಅದರಿಂದ ದುಷ್ಪರಿಣಾಮವುಂಟಾಗುತ್ತದೆಂಬ ಅಂಶ "ಮಹಾಪ್ರಸಾದಿ" ಕಾದಂಬರಿಯ ಪಾತ್ರಗಳಾದ ಡಾ॥ ಶಿವಪ್ರಸಾದ್ ಮತ್ತು ನಿಡುವಳ್ಳಿ ಮಠದ ಮಲ್ಲಿಕಾರ್ಜುನಯ್ಯ ಅವರ ಸಂಭಾಷಣೆಯಲ್ಲಿ ವ್ಯಕ್ತಗೊಂಡಿದೆ. ಗುರುಲಿಂಗ ಜಂಗಮ ವಸ್ತುವೊಂದು ಇದನ್ನು ತಿಳಿಯದ ವೀರಶೈವ ಧರ್ಮದಲ್ಲಿ ಭಿನ್ನತೆಯನ್ನು ತರುವವರನ್ನು ಕಂಡು ಲೇಖಕರ ಮನನೊಂದಿದೆ. ಮಠ–ಮಾನ್ಯ–ಪೀಠಗಳಲ್ಲಿ ಲೇಖಕರಿಗೆ ಅಭಿಮಾನ, ಗೌರವ ಭಕ್ತಿಗಳಿದ್ದರೂ ಕೂಡಾ ಅವುಗಳಲ್ಲಿ ಕಂಡು ಬರುವ ಸಂಕುಚಿತ – ಕೀಳಿರಿಮೆ ಮನೋಭಾವವನ್ನು ಕಂಡು ಬೇಸರಗೊಂಡಿದ್ದಾರೆ. ಸ್ವಾರ್ಥಕ್ಕಾಗಿ ಮಠಗಳನ್ನೂ ಮಠಾಧಿಪತಿಗಳನ್ನೂ ಉಪಯೋಗಿಸಿಕೊಳ್ಳುವ ಅವರ ಬಗ್ಗೆ ಅಸಹನೆ ಸಾತ್ವಿಕ ಕ್ರೋಧವ್ಯಕ್ತವಾಗಿದೆ. ತನ್ನಿಚ್ಚೆಗೆ ಗೆದ್ದಲ ಹುಳು ಹುತ್ತ ಕಟ್ಟುತ್ತದೆ, ಹಾವು ಆ ಹುತ್ತಕ್ಕೆ ಬಂದು ವಾಸ ಮಾಡುತ್ತದೆ. ಹೀಗೆ ಸ್ವಾರ್ಥಿಗಳೆಂಬ ಶಿಷ್ಯರು ಮಠಮಾನ್ಯಗಳಲ್ಲಿ ಹಾವುಗಳಂತೆ ವಾಸಿಸುತ್ತ ಧರ್ಮದ ಅವನತಿಗೆ ಕಾರಣರಾಗುತ್ತಾರೆ. ಗುರುಗಳು ಸಮಾಜದಿಂದ ಬೇರೆಯಾಗಿ ಅಡ್ಡದಾರಿ ಹಿಡಿದರೆ ಜನರೇ ಜಂಗಮರಾಗಿ ಅವರನ್ನು ತಿದ್ದುವ ಮೂಲಕ ಜಾಗೃತಗೊಳಿಸಬೇಕೆಂಬ ವೈಚಾರಿಕ ಅಂಶ ಈ ಕಾದಂಬರಿಯಲ್ಲಿದೆ. ಇದಕ್ಕೆ ಇತ್ತೀಚಿಗೆ ವಿವಾದಕ್ಕೀಡಾದ ಬೆಂಗಳೂರಿಗೆ ಸಮೀಪದಲ್ಲಿನ ಮಠವೊಂದು ಉದಾಹರಣೆಯಾಗಿ ನಿಲ್ಲುತ್ತದೆ. ಸಮಾಜದ ಸ್ವಾಸ್ಥ್ಯವನ್ನು ಕದಡುವಂತಹ ಪರಿಸ್ಥಿತಿಯಲ್ಲಿ ಜನತೆ ಜಾಗೃತರಾಗಿ ಭಹಿಷ್ಕಾರವನ್ನು ಘೋಷಣೆಯನ್ನು ಕೂಗುವ ಮೂಲಕ ನಡೆದ ಸಂಘರ್ಷವನ್ನು ಉತ್ತಮ ನಿದರ್ಶನವನ್ನಾಗಿ ನಾವು ನೋಡಬಹುದಾಗಿದೆ. ಸಂಕಲ್ಪ ಸ್ವಪ್ರಯತ್ನ ಮತ್ತು ಶೀಲಸಂಪನ್ನತೆಯಿದ್ದರೆ ಸಾಮಾನ್ಯನೂ ಸಾಧಕನಾಗುತ್ತಾನೆ, ಧಾರ್ಮಿಕ ವ್ಯಕ್ತಿ ಮತ್ತು ವಿಚಾರಗಳ ಬಗ್ಗೆ ಸಾಶಿಮರವರಿಗೆ ಅಪಾರ ಭಕ್ತಿ ಒಲಮೆಯಿದೆ. ಧಾರ್ಮಿಕ ಸಂಸ್ಥೆಗಳು ಪರಿಶುದ್ದವಾಗಿದ್ದು ಜನಸಾಮಾನ್ಯರಿಗೆ ಮಾರ್ಗದರ್ಶನ ಮಾಡುವ ಮೂಲಕ ರಾಷ್ಟ್ರದ ಏಳ್ಗೆಗೆ ಉತ್ತಮ ಸಮಾಜ ಕಟ್ಟುವ ಕಾರ್ಯ ಹಾಗೂ ಹಾದಿಯನ್ನು ತೋರಿಸಬೇಕು ಎಂಬ ಮಹತ್ತರವಾದ ಕಳಕಳಿಯಿದೆ. ಈ ಕಾರಣದಿಂದ ಧರ್ಮದ ಅನೇಕ ವಿಚಾರಗಳ ವಿಶ್ಲೇಷಣೆ ಇವರ ಮಹಾಪ್ರಸಾದಿ ಕಾದಂಬರಿಯಲ್ಲಿದೆ.

"ಗುರು–ವೀರಕ್ತರ ಮಡಿತನದ ಭಿನ್ನ–ಭಾವನೆಗಳನ್ನು ನೋಡಿ ಲಿಂಗಧಾರಿಗಳಾದ ಸಾದರು, ನೊಣಬರು, ಕುಂಬಾರರು, ಮಡಿವಾಳರು, ಹಡಪದವರು ತಮ್ಮಲ್ಲೇ ಕೆಲವರು ಜಂಗಮರನ್ನು ಸೃಷ್ಟಿಸಿಕೊಂಡರು. ಸಮಾಜದ ನಾಯಕರು, ಸ್ವಾಮಿಗಳು, ಬುದ್ಧಿ ಜೀವಿಗಳು ಹಣವಂತ ವರ್ತಕರು ಇವರೇ ಮೊದಲಾದವರ ಕೈಗೆ ಸಿಕ್ಕು ವಿಶ್ವಧರ್ಮವೆನಿಸಬಹುದಾಗಿದ್ದ ವೀರಶೈವ ಕೇವಲ ಒಂದು ಮತವಾಗಿ ಪರಿಣಾಮ ಪಡೆಯಿತು. ಇನ್ನೂ ಉಳಿದ ಅಮಾಯಕ ಅವಿದ್ಯಾವಂತ, ಅಶಕ್ತ ಜನ ಹಣವಂತರ ಗುಲಾಮರಾಗಿ, ಇಲ್ಲವೇ ಮಠದ ನಾಯಿಗಳಾಗಿ ಬದುಕು ಮಾಡಿದವು, ಬಡಜನರ ಕಣ್ಣಿಗೆ ಮಣ್ಣೆರಚಿ, ಅವರ ಮತಗಿಟ್ಟಿಸಿಕೊಂಡು, ನೋಟು ಮಾಡುತ್ತಿರುವ ರಾಜಕಾರಣಿಗಳಂತೆ ನಮ್ಮ ನಿಮ್ಮಂತಹ ಸಮೀಪದ ಹಿರಿಯರೂ ಮಠಾಧಿಪತಿಗಳಂತೆ ವರ್ತಿಸಿದರು. ರಕ್ಷಕರಾದವರೇ ಸಮಾಜದ ಭಕ್ಷಕರಾದರು! ಅದರಿಂದಾಗಿ ನಮ್ಮ ಭಂಡಾರಿ ನೇಕಾರ, ಕುಂಬಾರ ಬಡಗಿ, ಚಮ್ಮಾರ,ಕುರುಬ, ಕಮ್ಮಾರ, ಮಡಿವಾಳ, ವರ್ತಕ

ಮೊದಲಾದವರು ಭಂಡಾರಿಮಾರಿ, ನೇಕಾರರಾಗಿ, ಕುಂಬಾರರಾಗಿ. ಬಡಗಿಯಾಗಿ, ಚಮ್ಮಾರನಾಗಿ, ಕುರುಬನಾಗಿ, ಮಡಿವಾಳಿಯಾಗಿ, ವರ್ತಕನಾಗಿಯೆ ಉಳಿದರು, ವೀರಶೈವರಾಗಲೇ ಇಲ್ಲ. ಇಂತೆಲ್ಲ ಕಾಯಕಯೋಗಿಗಳನ್ನು ಪಡೆದ ಲಿಂಗನಂತೆ ಸಮಾಜ ಅವರೆಲ್ಲರನ್ನು ತನ್ನ ರಕ್ಷಣೆಯಲ್ಲಿಟ್ಟುಕೊಂಡು ರಕ್ಷಿಸಿಕೊಂಡು ಬರುವ ಸೌಭಾಗ್ಯವನ್ನು ಪಡೆಯಲೇ ಇಲ್ಲ"[೬] ಶ್ರೀಶಿವಬಸವ ಸ್ವಾಮಿಗಳ ಈ ಒಂದು ಯೋಚನೆಯೇ ಸಾಕು ಅವರು ಹೊಂದಿದ್ದ ಹೃದಯ ವೈಶಾಲ್ಯತೆಗೆ ವೀರಶೈವ ಧರ್ಮವನ್ನು ಬೆಳೆಸಬೇಕಾದ ಅಗತ್ಯತೆಯನ್ನು ಹಾಗೂ ಅದು ಪಡೆಯಬೇಕಾದ ಜಾತ್ಯಾತೀತೆಯನ್ನು ತಮ್ಮ ಜೀವನದುದ್ದಕ್ಕೂ ಬೋಧಿಸಿದ್ದಾರೆ. ಹಾಗೆಯೇ ಇತ್ತೀಚಿನ ದಿನಗಳಲ್ಲಿಯೂ ಕೂಡಾ ಜಾತಿಗೊಂದು ಮಠ ಉಪಜಾತಿಗೊಂದು ಮಠ ಮಾನ್ಯಗಳು ಸೃಷ್ಟಿಯಾಗುತ್ತಿದ್ದು, ರಾಜಕೀಯ ತಿರುವುಗಳನ್ನು ಪಡೆಯುತ್ತಿರುವುದು ವಿಪರ್ಯಾಸವೇ ಸರಿ ಎಂಬಂತಾಗಿದೆ.

ಸಾ.ಶಿ.ಮರವರ ಕೃತಿ "ನಿರೂಪಣಾ ಶೈಲಿಯಂತೂ ಉತ್ಸಾಹದಾಯಕ, ಮನೋಹರ, ಧಾರ್ಮಿಕ ವ್ಯಕ್ತಿ ವಿಚಾರಗಳೇ ಪ್ರಧಾನವಾಗಿದ್ದರೂ ಎಲ್ಲಿಯೂ ಬೇಸರ ಉಂಟಾಗದಂತಹ ಲವಲವಿಕೆಯ ಸಂಭಾಷಣೆಗಳು ವರ್ಣನೆಗಳಿವೆ. ಮಹಾಪ್ರಸಾದಿ ಧಾರ್ಮಿಕ ಸಾಹಿತ್ಯ ನೂಲಿಕೆಗೆ ಒಂದು ಅಪೂರ್ವ ಕೊಡುಗೆ"[೭] ಶ್ರೀ ಶಿವಬಸವಸ್ವಾಮಿಗಳು ಕರ್ನಾಟಕದ ನಾನಾ ಭಾಗಗಳಲ್ಲಿ ಉಚಿತ ವಿದ್ಯಾಭ್ಯಾಸ ನೀಡುವ ಸಲುವಾಗಿ ಹಲವಾರು ವಿದ್ಯಾಸಂಸ್ಥೆಗಳನ್ನು ತೆರೆದಿದ್ದಾರೆ. ಅವೆಲ್ಲವೂ ಸುವ್ಯವಸ್ಥಿತವಾಗಿ ನಡೆಯುತ್ತಿವೆ. ನಾಗನೂರ ಶ್ರೀ ಶಿವಬಸವ ಸ್ವಾಮಿಗಳ ಕಲ್ಯಾಣ ಕೇಂದ್ರಗಳು ಅನೇಕ ಜನಹಿತ ಕಾರ್ಯಗಳಲ್ಲೇ ಸಾಗುತ್ತ ಬಂದಿವೆ. ಇದು ಶ್ರೀ ಶಿವಬಸವ ಸ್ವಾಮಿಗಳ ಕತೃತ್ವಕ್ಕೆ ಸಾಕ್ಷಿಯಾಗಿ ನಿಂತಿದೆ. ದಾಸೋಹದ ಪರಿಕಲ್ಪನೆಯಿಂದ ಕೂಡಿ ಬಾಳುವ ಸಮಾನತೆಯನ್ನು ಪಡೆದುಕೊಳ್ಳುವಲ್ಲಿ ಯಶಸ್ವಿ ಹೆಜ್ಜೆಯನ್ನಿಟ್ಟು ಆಸ್ತಿ ಮಾಡುವುದು ಸಂಪತ್ತನ್ನು ಕೂಡಿಡುವುದು ಇಂತಹವುಗಳನ್ನು ಬಿಟ್ಟು ಪ್ರಕೃತಿಯಲ್ಲಿ ಇರುವ ಸಂಪತ್ತನ್ನು ಸದ್ವಿನಿಯೋಗಪಡಿಸಿಕೊಳ್ಳುವ ಮಾರ್ಗವನ್ನು ಕಾಣುತ್ತೇವೆ. ಸಮಾಜದಲ್ಲಿ ಆರ್ಥಿಕ ಸಮಾನತೆ ನೆಲೆಸಲು ಹಂಚಿಕೊಂಡು ಬದುಕುವ ಚಿತ್ರಣವನ್ನು ನಾವು ಗಮನಿಸಬಹುದು.

ಆರ್.ಬಸವರಾಜರವರು ಅಭಿಪ್ರಾಯ ಪಡುವಂತೆ "ಧಾರ್ಮಿಕ ವ್ಯಕ್ತಿ ಮತ್ತು ವಿಚಾರಗಳ ಬಗ್ಗೆ ಸಾ.ಶಿ.ಮರವರಿಗೆ ಭಕ್ತಿಯಿದೆ. ಧಾರ್ಮಿಕ ಸಂಸ್ಥೆಗಳು ಪರಿಶುದ್ಧವಾಗಿದ್ದು ಜನ ಸಾಮಾನ್ಯರಿಗೆ ಮಾರ್ಗದರ್ಶನ ಮಾಡಬೇಕೆಂಬ ಕಳಕಳಿಯಿದೆ. ಈ ಕಾರಣದಿಂದ ಧರ್ಮದ ಅನೇಕ ವಿಚಾರಗಳ ವಿಶ್ಲೇಷಣೆ ಕೂಡ ಇದೆ. ಹಾಗೂ ಸಾ. ಶಿ. ಮ ರವರ ಕಾದಂಬರಿಗಳಲ್ಲಿ ವೈಚಾರಿಕತೆಯು ಮೈದಳೆದಿದೆ.

ಧರ್ಮಗ್ರಂಥಗಳ ಆತ್ಯಂತಿಕವಾದ ಕಾಳಜಿಗಳ ಒಟ್ಟು ರೂಪವೇ ಮೌಲ್ಯವಾಗಿ ಮುಖ್ಯ ಪಾತ್ರವನ್ನು ವಹಿಸುತ್ತವೆ. ಮೌಲ್ಯವೂ ಜನಜೀವನದ ವ್ಯಕ್ತಿತ್ವವನ್ನು ಶುದ್ಧೀಕರಿಸಿಕೊಳ್ಳುವ ನೈತಿಕತೆಯನ್ನು ಹೊಂದುವ ನಿಟ್ಟಿನಲ್ಲಿ ಪ್ರಮುಖವಾಗುತ್ತದೆ. ಇದು ಸಾಮಾಜಿಕ, ರಾಜಕೀಯ, ನೈತಿಕ, ಆರ್ಥಿಕ ಇವುಗಳೆಲ್ಲದರಲ್ಲಿಯೂ ಹಾಸುಹೊಕ್ಕಾಗಿದೆ. ಒಂದು ಸಮಾಜವು ಆದರ್ಶದ ಕಡೆಗೆ ಸಾಗಬೇಕಾದರೆ ಅದರ ಅವಯವಗಳಲ್ಲಿ ಮೌಲಿಕವಾದ ಅಂಶಗಳನ್ನು ಹೊಂದಬೇಕಾಗುತ್ತದೆ. ಇದು ಸಾರ್ವಜನಿಕರಲ್ಲಿ ಅಂಶಗಳ ಅಳವಡಿಕೆಯಿಂದಾಗಿ ಜನರು ತಮ್ಮ ಲೋಕ ವ್ಯವಹಾರಗಳಲ್ಲಿ ಆತ್ಮೀಯತೆಯ ಪ್ರೀತಿಯನ್ನು ಉಳಿಸಿಕೊಂಡು ಹೋಗುತ್ತಾರೆ. ಇದು ರಾಷ್ಟ್ರಪ್ರೇಮ ಮಾನವ ಪ್ರೇಮಿಗಳಲ್ಲಿ ಬದ್ಧತೆಗೆ ಒಳಗೊಳ್ಳುತ್ತದೆ. ಮನಷ್ಯನ ಮೂಲಭೂತ ಅವಶ್ಯಕತೆಗಳು ಹಾಗೂ ಜವಾಬ್ದಾರಿಗಳನ್ನು ಕೇಂದ್ರೀಕರಿಸಿಕೊಂಡು ಆ ಮೂಲಕ ಮೌಲ್ಯಗಳನ್ನು ನೈತಿಕ ಹೊಣೆಗಾರಿಕೆಯನ್ನಾಗಿ ಸಾಮುದಾಯಿಕ ಪ್ರಜ್ಞೆಯನ್ನಾಗಿ ಮೂಡಿಸಬೇಕು. ಹಾಗೂ ಮೌಲ್ಯ ಮನುಷ್ಯನ ಜೀವನದ ಸಮಗ್ರತೆಯನ್ನು ಒಳಗೊಳ್ಳಬಹುದಾದ ಅಂಶವಾಗಿದೆ. ಮನುಷ್ಯನ ಬದುಕು ನಾಗರೀಕತೆಯತ್ತ ಸಾಗುತ್ತಾ ಸೌಕರ್ಯ ಸವಲತ್ತು ಆಧುನಿಕತೆಯಲ್ಲಿ ಸಂಕುಚಿತಗೊಳ್ಳುತ್ತಾ ಹೋಗಬಹುದು. ಆದರೆ ಮಾನವೀಯತೆ ಎಂಬುದು ಆ ದೃಷ್ಟಿಕೋನವನ್ನು ಮೀರಿ ನಡೆಯುತ್ತದೆ. ಆಧುನಿಕತೆ ಸಂಸ್ಕೃತಿಗಳಲ್ಲಿ ಭಿನ್ನತೆಗಳಿದ್ದರೂ ಮನುಷ್ಯ ಜೀವಿತದ ವಿಧಿಯ ಬದುಕು ಹುಟ್ಟು ಸಾವುಗಳ ಮಧ್ಯದಲ್ಲಿರುತ್ತದೆ. ಹೇಗೆ ಬದುಕಿದ ಹೇಗೆ ಬದುಕಲು ಅನುವಾದ ಎಂಬುದೇ ಮುಖ್ಯವಾಗುತ್ತದೆ. ಅವುಗಳು ತಮ್ಮ ಸಿದ್ಧಾಂತಗಳ ಮೂಲಕ ಮಾನವೀಯ ಮೌಲ್ಯಗಳ ನೀಡುತ್ತವೆ. ಆದರೆ ಬಹುತೇಕ ಮೌಲ್ಯಗಳು ತಾರತಮ್ಯದ ವ್ಯವಸ್ಥೆಯೂ ಉಂಟಾಗುತ್ತದೆ. ಸ್ವಾತಂತ್ರ್ಯ, ಸಾಮಾಜಿಕ ಹಿತಾಸಕ್ತಿ, ಧಾರ್ಮಿಕ ನಂಬಿಕೆಗಳು ಇತ್ಯಾದಿ ಅಂಶಗಳಲ್ಲಿ ಭಿನ್ನತೆಯನ್ನು ಕಾಣುತ್ತವೆ. ಆದರೆ ಒಂದು ವೈಚಾರಿಕವಾದ ಸಾಮಾಜಿಕ ಬದ್ಧತೆಯು ಮಾನವೀಯ ಮೌಲ್ಯಗಳನ್ನು ಸಮೀಕರಿಸುತ್ತದೆ. ಸಮರ್ಪಣಾ ಭಾವ ಯಾವ ಪರಮಾತ್ಮನ ಸಾನಿಧ್ಯದಿಂದ ನಮ್ಮ ಪ್ರಾಣ ಬುದ್ಧಿ ಮನಸ್ಸು ಆತ್ಮ ದೇಹ ಐಶ್ವರ್ಯಗಳು ಅತ್ಯಂತ ಪ್ರಿಯವಾಗುತ್ತವೊ ಅವನಿಗಿಂತ ಬೇರೆಯಾದ ಪ್ರಿಯಕರವಾದ ವಸ್ತು ಯಾವುದು ಎಂಬ ಅಭಿಪ್ರಾಯಕ್ಕೆ ಬರುತ್ತಾನೆ. ಆದರೆ ನಿಜವಾದ ಭಕ್ತನಿಗೆ ದೈವ ಒಂದೇ ಕೇಂದ್ರವಾಗಿರುತ್ತದೆ. ಅವನಿಗೆ ಜಾತಿ, ಕುಲ, ಅಂತಸ್ತು, ವರ್ಗ, ಮೇಲು, ಕೀಳು ಭಾವಗಳು ಇಲ್ಲವಾಗಿರುತ್ತದೆ. ಭಕ್ತನು ರೂಪುಗೊಳ್ಳುವುದು ಈ ಅಂತರ್ ಮೌಲ್ಯಗಳಿಂದಾಗಿ ಆಗಿರುತ್ತದೆ. ಇತರರೊಂದಿಗೆ ಸಂಬಂಧಗಳಲ್ಲಿ ಮೋಸ, ದರ್ಪ, ಅಹಂಕಾರದ ಭಾವಗಳನ್ನು ಬಿಟ್ಟು ವಿನಯತೆಯನ್ನು ಒಂದು ಮೌಲ್ಯವನ್ನಾಗಿ ಸ್ವೀಕರಿಸಿ ಆಚರಣೆಗೆ ತಂದಾಗ ಮನುಷ್ಯರಲ್ಲಿ ವಿನಾಕಾರಣದ ದ್ವೇಷ, ಜಗಳ, ದುಷ್ಕೃತ್ಯಗಳು ಇಲ್ಲದಂತಾಗುತ್ತವೆ ಎಂಬ ಸಂದೇಶವನ್ನು ನಾವು ಇಲ್ಲಿ ಗುರುತಿಸಬಹುದಾಗಿದೆ.

**ನಾಟಕಗಳು**

ಸಮಾಜದ ಕುರಿತಾಗಿ ಚಿಂತಿಸುವ ಸಾಹಿತಿಯು ಸಾಮಾಜಿಕ ಅನ್ಯಾಯಗಳನ್ನು ಗುರುತಿಸಿ, ಅವುಗಳ ವಿರುದ್ಧ ಆಕ್ರೋಶ, ಪ್ರತಿಭಟನೆ ತೋರುವುದು ಸಹಜವಾದುದು. ಸಮಕಾಲೀನ ಜನತೆಯ ಮೌಲ್ಯಗಳು, ಆತಂಕಗಳು, ನೋವು–ನಲಿವು, ಮಿತಿಗಳು ಮುಂತಾದ ಅಂಶಗಳ ಜೊತೆಗೆ ಬದುಕಿನಲ್ಲಿ ಲೀನವಾಗಿರುವ ಸಾರ್ವಕಾಲಿಕ ಮೌಲ್ಯಗಳನ್ನು ಅರ್ಥಮಾಡಿಕೊಂಡು ಕೃತಿಗಳ ಮೂಲಕ ಬಿಂಬಿಸುವುದಾಗಿದೆ. ಆಧುನಿಕ ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಸಾ.ಶಿ.ಮರವರ ವೈಚಾರಿಕತೆಯ ನಿಲುವನ್ನು ತಿಳಿಯಬಹುದಾಗಿದೆ. ಸಾಮಾಜಿಕ, ಐತಿಹಾಸಿಕ, ಪೌರಾಣಿಕ ನಾಟಕಗಳೆಂದು ಒಟ್ಟು ಹದಿನಾಲ್ಕು ನಾಟಕಗಳನ್ನು ರಚಿಸಿದ್ದಾರೆ. ಸಾ.ಶಿ.ಮ ರವರ ನಾಟಕಗಳಲ್ಲಿ ವರ್ಗ–ವರ್ಣ ಸಂಘರ್ಷದ ನೆಲೆಗಳು, ಸಾಮಾಜಿಕ ವಿಮರ್ಶೆಯನ್ನು ವಿಡಂಬನಾತ್ಮಕವಾಗಿ ರಚಿಸಿದ್ದಾರೆ. ಸಮಕಾಲೀನ, ಪರಂಪರಾಗತ ಮತ್ತು ಪೂರ್ವಕಾಲೀನ ಸಂಗತಿಗಳಾಗಿ ಸಾಮಾಜಿಕತೆ ಹಾಗೂ ಆಧ್ಯಾತ್ಮಿಕತೆಗಳ ಸಾಮರಸ್ಯದಿಂದ ಅವರದೇ ಆದ ವಿಶಿಷ್ಠ ರೀತಿಯಿಂದ ನಾಟಕ ರೂಪಗಳಲ್ಲಿ ಪ್ರಸ್ತುತಪಡಿಸಿದ್ದಾರೆ. ಅವರ ನಾಟಕಗಳ ಆಶಯವು ಸಾಮಾಜಿಕ, ಸಾಂಸ್ಕೃತಿಕ ವೈಚಾರಿಕವಾಗಿ ಮೌಲ್ಯಗಳಿಗೆ ನೀಡಿದ ಪ್ರತಿಕ್ರಿಯೆಗಳಾಗಿವೆ.

೧೯೬೧ ರಲ್ಲಿ ರಚಿತವಾದ 'ಮರೀಬೇಡಿ' ನಾಟಕದಲ್ಲಿ ಮರಗುಳಿಯಾದ ಪ್ರಾಣಿಶಾಸ್ತ್ರ ಪ್ರೊಫೆಸರನೊಬ್ಬನ ಸುತ್ತ ಹೆಣೆದ ಕಥೆಯಾಗಿದೆ. ಮರೆಗುಳಿತನದ ವಿವಿಧ ಮುಖಗಳನ್ನು ಪರಿಚಯಿಸುವುದರ ಜೊತೆಗೆ ಮರಗುಳಿತನ ದಾರಿ ಮಾಡಬಹುದಾದ ಮುಜುಗರ, ಪರಿಸ್ಥಿತಿ–ದುರಂತಗಳನ್ನು ನಾಟಕದ

ಬೆಳವಣಿಗೆಯು ಸೂಚಿಸುತ್ತದೆ. ಇಲ್ಲಿನ ಸನ್ನಿವೇಶ, ಸಂದರ್ಭಗಳು ಪ್ರೋಫೆಸರನ ಮರಗಳಿತನದ ಪರಿಣಾಮವಾಗಿ ಹುಟ್ಟಿಕೊಳ್ಳುವಂತಹವು. ಈ ಅವಾಂತರಗಳು ಪ್ರೇಕ್ಷಕರನ್ನು ನಗೆಗಡಲಲ್ಲಿ ಮುಳುಗಿಸುತ್ತವೆ ಎನ್ನುವುದು ನಿಜವಾದರೂ, ಕೆಲವು ಗಂಭೀರ ಪರಿಣಾಮಗಳಿಗೆ ದಾರಿ ಮಾಡಿ ದುರಂತವಾಗಿಸುವ ಅಪಾಯಗಳೂ ಇವೆ. ಔಷಧಿಗೆ ಬದಲಾಗಿ ಮಗುವಿಗೆ ಇಂಕನ್ನು ಕುಡಿಸಿ ಸಾವಿನಂಚಿಗೆ ಕೊಂಡೊಯ್ದದ್ದು ಸಾಕ್ಷಿಯಾಗಿ ನಿಲ್ಲುತ್ತದೆ. ಪ್ರಸ್ತುತ ನಾಟಕವು ಮೂರು ದೃಶ್ಯಗಳನ್ನು ಒಳಗೊಂಡಿದ್ದು. ಚುರುಕಾದ, ಲವಲವಿಕೆಯ ಮಾತುಗಳು, ಹೆಜ್ಜೆ ಹೆಜ್ಜೆಗೂ ಪ್ರೊಫೆಸರನ ಮರೆಗುಳಿತನದ ತೀವ್ರತೆಯ ಸ್ವರೂಪವನ್ನು ತಿಳಿಸುತ್ತಾ ಹೋಗುತ್ತವೆ. ತಾನೇನು? ಎಲ್ಲಿದ್ದೇನೆ? ತನ್ನೆದುರು ಇರುವವರು ಯಾರು? ತಾನೇನು ಮಾಡುತ್ತಿದ್ದೇನೆ? ತಾನೇನು ಕುಡಿಯುತ್ತಿದ್ದೇನೆ? ಎನ್ನುವುದನ್ನೂ ಮರೆತು ಹೋಗುತ್ತಾನೆ.

ಸಾಮಾಜಿಕ ವಸ್ತುವನ್ನೊಳಗೊಂಡ ಈ ನಾಟಕದಲ್ಲಿ ಹಾಸ್ಯವೇ ಬಂಡವಾಳ, ಇಂತಹ ಮರಗುಳಿಯನ್ನು ಮದುವೆಯಾದ ಮಡದಿಯ ಪಾಡು ಹೇಳತೀರದು. ಜೀವನದಲ್ಲಿ ಗಂಡ–ಹೆಂಡಿರ ನಡುವಿನ ವಿರಸ ವಾಗ್ವಾದ ಆರೋಪ–ಪ್ರತ್ಯಾರೋಪಗಳೆಲ್ಲವೂ ಕಿಡಿಯಾಗಿ ಬೆಂಕಿಯಾಗಿ ಸುಡದೆ ಮರಗುಳಿತನದ ಪರಿಣಾಮವಾಗಿ ತಣ್ಣನೆಗೆ ಆರಿ ಹೋಗುತ್ತದೆ. ಹಳಿದು ಹೋಗಬಹುದಾದ ಸಂಬಂಧಗಳೂ ರಾಜಣ್ಣನ ಆರೋಗ್ಯ ಪೂರ್ಣವಾದ ಹಗುರಾದ ಮನಸ್ಥಿತಿಯಿಂದ ಗಟ್ಟಿಯಾಗಿ ಉಳಿಯುತ್ತವೆ.

ರಾಜಣ್ಣನ ಮರುಗುಳಿತನಕ್ಕೆ ನಾಟಕದಲ್ಲಿ ಅನೇಕ ನಿದರ್ಶಗಳಿವೆ. ಹೆಂಡತಿಯೊಡನೆ ಮಾತಾಡುವುದು ಮರೆತು ಭಾಷಣ ಮಾಡುತ್ತಾನೆ. ಕೆಲಸದಾಕೆಯನ್ನು ಹೆಂಡತಿಯೆಂದು ಅಪ್ಪಿಕೊಳ್ಳುತ್ತಾನೆ. ಕಾಫಿ ಲೋಟವೆಂದು ಕಪ್ಪೆಗಳನ್ನು ತಂದಿರಿಸಿದ್ದನ್ನೇ ಬಾಯಿಗೆತ್ತಿಕೊಳ್ಳುತ್ತಾನೆ, ಕೇಳುವ ಪ್ರಶ್ನೆಗಳಿಗೆ ಅಸಂಬದ್ಧವಾಗಿ ಉತ್ತರಿಸುತ್ತಾನೆ. ಇಂತದೆಲ್ಲ ಮಾಡುವ ಗಂಡನ ಬಗ್ಗೆ ಬೇಸರ ಪಟ್ಟ ಹೆಂಡತಿ "ನಿಮ್ಮ ಬುದ್ಧಿವಂತಿಕೆ ಹೀಗೆಂತ ಗೊತ್ತಿದ್ದರೆ ನಮ್ಮಪ್ಪ ದೇವರಾಣೆಗೂ ನನ್ನನ್ನು ಕೊಡಿರ್ತಲಿಲ್ಲ ನಿಮಗೆ"[೮] ಅಲ್ವೇ ಹುಚ್ಚಿ ನಿಮ್ಮಪ್ಪನ ದಡ್ಡತನ ಹಾಗಿರಲಿ, ನಮ್ಮಪ್ಪನ ಬುದ್ಧಿವಂತಿಕೆ ಏನು ಗೊತ್ತಾ? ತನ್ನದೂ ಅನ್ನೋ ಒಂದು ವಸ್ತು ಇರಲಿ, ಇಲ್ಲದೆ ಇದ್ದರೆ ನನ್ನ ಮಗ ಅರಬ್ಬೀ ಸಮುದ್ರ ದಾಟಿ ಆಫ್ರೀಕದ ಕಡೆಗೆ ಹೊರಟುಬಿಟ್ಟನು ಅಂತ ಹೇಳಿ ನನಗೆ ನೆನಪು ಮಾಡಿಕೊಡೋದಕ್ಕಾಗಿ ನಿನ್ನಂಥಾ ಮೇಧಾವಿ ಮಹಿಳೆಯನ್ನು ಮದುವೆ ಮಾಡಿದ ನೋಡು ಎಂದು ರಾಜಣ್ಣ ಉತ್ತರಿಸಿದಾಗ, ಘರ್ಷಣೆಗೆ, ಚರ್ಚೆಗೆ ಆಸ್ಪದವೇ ಇಲ್ಲದಂತೆ ಗಂಡ ಹೆಂಡಿರ ನಡುವಿನ ವಾತಾವರಣ ತಿಳಿಯಾಗಿ ಬಿಡುತ್ತದೆ. ಮರೆಗುಳಿ ಪ್ರೊಫೆಸರನಿಗೆ ಮರೆವು ಮನುಷ್ಯನಿಗೆ ಬದುಕನ್ನು ಸಹನೀಯವಾಗಿಸಲು ಬೇಕೇಬೇಕೆನ್ನುವ ಸರಳ ತತ್ವದಂತೆ ಕಾಣಿಸುತ್ತದೆ. "ಮರೆವಿಲ್ಲದಿದ್ದರೆ ಈ ನಾಟಕ ರಂಗದ ಮೇಲೆ ಅತ್ಯಂತ ಪರಿಣಾಮಕಾರಿಯಾಗಬಲ್ಲದು ಎಂಬುವುದರಲ್ಲಿ ಸಂಶಯವಿಲ್ಲ. ನಾಟಕ ತತ್ವ ಸಿದ್ಧಾಂತಗಳ ಗೊಡವೆ ಇಲ್ಲದೆ, ಮಾತಿನ ಜಾಣ್ಮೆ ಚುರುಕು ಸಂಭಾಷಣೆಗಳಿಂದಲೂ ನಾಟಕ ಯಶಸ್ವಿಯಾಗಬಲ್ಲುದೆಂಬುಕ್ಕೆ ಈ ನಾಟಕ ಸಾಕ್ಷಿಯಾಗಿದೆ."[೯]

ಸಾಶಿಮರ ಈ ನಾಟಕ ವ್ಯಂಗ್ಯತೆಗೆ ಹೆಚ್ಚು ಮಹತ್ವ ಕೊಟ್ಟಂತೆ ಕಾಣಿಸುತ್ತದೆ. ಒಮ್ಮೊಮ್ಮೆ ಪ್ರತಿಭಟನೆ ಹೋರಾಟ ನಿರರ್ಥಕ ಏನೆನಿಸುತ್ತದೆ. ಆಧುನಿಕತೆಯ ಯಾಂತ್ರಿಕ ಜೀವನದಲ್ಲಿ ಮನುಷ್ಯ ತನ್ನ ಹಕ್ಕಿಗಾಗಿ ಹೋರಾಡುತ್ತಾನೆ ನಿಜ. ಆದರೆ ಅದೇ ಸಂದರ್ಭದಲ್ಲಿ ತಾನು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಮರೆಯುತ್ತಾನೆ ಎಂಬ ಬೇಸರ ಕವಿಗೆ ಇದ್ದಂತಿದೆ.

ಆದಿಕಾಲದಲ್ಲಿ ಇದ್ದಂತಹ ಕೌಟುಂಬಿಕ ವ್ಯವಸ್ಥೆಯು ಇಂದಿನ ದಿನಗಳಲ್ಲಿ ಕಾಣಲಾಗುತ್ತಿಲ್ಲ ಐದಾರು ತಲೆಮಾರುಗಳು ಒಂದೇ ಸೂರಿನಡಿ ಒಟ್ಟಿಗೆ ಜೀವನವನ್ನು ಮಾಡುತ್ತಾ, ನೋವು–ನಲಿವುಗಳಲ್ಲಿ ಭಾಗಿಯಾಗಿ ಜೀವಿಸುತ್ತಿದ್ದರು. ಹೀಗೆ ಇದ್ದಂತಹ ಅವಿಭಕ್ತ ಕುಟುಂಬಗಳು ಜಾಗತೀಕರಣದ ಪ್ರಭಾವದಿಂದ ಕಾಲಕ್ರಮೇಣ ನಶಿಸುತ್ತಾ ವಿಭಕ್ತ ಕುಟುಂಬಗಳಾಗಿ ಪರಿವರ್ತನೆ ಹೊಂದಿದವು. ಯಾಂತ್ರಿಕ ಜೀವನದ ಜಂಜಾಟದಿಂದ ಗಂಡ–ಹೆಂಡತಿಯರ ನಡುವಿನ ಘರ್ಷಣೆಗಳು ತಾರಕಕ್ಕೇರಿ ವಿಚ್ಛೇದನ ಪ್ರಕರಣಗಳು ಆಧುನಿಕ ಸಮಾಜದಲ್ಲಿ ಹೆಚ್ಚುತ್ತಿವೆ. ಉತ್ತಮ ಕೌಟುಂಬಿಕ ಜೀವನ ಸಾಗಿಸಲು ಪತಿಪತ್ನಿಯರ ಪಾತ್ರ ಅತಿ ಮುಖ್ಯವಾದುದು. ಸಂಸಾರವೆಂಬ ಬಂಡಿ ಸಾಗಿಸಲು ಜೋಡಿ ಎತ್ತುಗಳಂತೆ ಸಾಗಬೇಕಾದುದು ಇಂದಿನ ಸಾಮಾಜಿಕ ಬದಲಾವಣೆಯಲ್ಲಿ ಮುಖ್ಯವಾದುದಾಗಿದೆ. ಗಂಡ ಹೆಂಡತಿಯರಲ್ಲಿ ಸರಸ ವಿರಸಗಳು ಸಹಜವಾಗಿದ್ದು, ತೀರಾ ಘರ್ಷಣೆಗೊಳಗಾಗದೆ ಇಬ್ಬರಲ್ಲಿ ಯಾರಾದರೊಬ್ಬರು ಸನ್ನಿವೇಶಕ್ಕನುಗುಣವಾಗಿ ಮೌನವಹಿಸುವುದು ಉತ್ತಮ. ಕೆಲವು ಘಟನೆಗಳು ಗೊತ್ತಿದ್ದರೂ ಗೊತ್ತಿಲ್ಲದಂತಿರುವುದು ಸುಖಸಂಸಾರದ ಗುಟ್ಟಾಗಿದೆ. ಎಂಬ ವಿಚಾರಪರ ಸತ್ಯವನ್ನು ಸಾಶಿಮ ರವರ 'ಮರಿಬೇಡಿ' ನಾಟಕವು ಇಂದಿನ ಕೌಟುಂಬಿಕ ಜೀವನಕ್ಕೆ ಉತ್ತಮವಾದ ಸಂದೇಶವನ್ನು ನೀಡಿದೆ. ಬೆಂದು ಬಳಲುತ್ತಿರುವ ಬಾಳಿನಲ್ಲಿ ಮರೆವಿಲ್ಲದಿದ್ದರೆ, ಮಾಡಿದ ಪಾಪಪುಣ್ಯ, ಅನುಭವಿಸಿದ ಅನ್ಯಾಯ ದ್ರೋಹಗಳು ಅಂತರಾಳದಲ್ಲಿ ಮನೆಮಾಡಿ ಸದಾ ಸ್ಮರಣೆಗೆ ಬಂದು ಮಾನಸಿಕ ರೋಗಗಳಿಗೆ ಬಲಿಯಾಗುತ್ತಾನೆ ಎನ್ನುವ ಮಾತು ಅಲ್ಲವೆನಿಸಿದರೂ ಸಹ ಅದರಲ್ಲಿ ಅಡಗಿರುವ ಗಂಭೀರವಾದ ಸತ್ಯಾಂಶ ಸ್ಪಷ್ಟವಾಗಿ ಗೋಚರಿಸುತ್ತದೆ.

ಐತಿಹಾಸಿಕ ವಸ್ತುವುಳ್ಳ 'ವಿಜಯವಾತಾಪಿ' ನಾಟಕ ೧೯೬೩ರಲ್ಲಿ ರಚನೆಯಾಗಿದೆ. ಮೂರು ಅಂಕಗಳು ೧೭ ದೃಶ್ಯಗಳನ್ನು ಒಳಗೊಂಡಿದ್ದು ರಾಜಕೀಯ, ಸಾಮಾಜಿಕ, ಧಾರ್ಮಿಕ ಅಂಶಗಳನ್ನುಳ್ಳ ಗಂಭೀರ ನಾಟಕವಾಗಿದೆ. ಇದರಲ್ಲಿ ರಾಜಕೀಯ ಪ್ರಜ್ಞಾಬದ್ಧತೆ ಇದ್ದು, ಪಲ್ಲವರಿಂದ ಪರಾಭಗೊಂಡ ವಾತಾಪಿಯ ಚಾಲುಕ್ಯರು ಮತ್ತೆ ರಾಜಕೀಯ ಷಡ್ಯಂತ್ರದಿಂದ ಪಲ್ಲವರನ್ನು ಸೋಲಿಸಿ ವಾತಾಪಿಯನ್ನು ಮರಳಿ ಗೆದ್ದುಕೊಳ್ಳುವುದೇ ಮುಖ್ಯವಸ್ತುವಾದರೂ ಇದರ ಸಮಾಂತರದಲ್ಲಿ ಭಕ್ತ ಸಿರಿಯಾಳದ ಕತೆ ಉಪಕತೆಯಾಗಿ ಇದರೊಂದಿಗೆ ಹೆಣೆದುಕೊಂಡಿದೆ. ಮುಖ್ಯ ಕಥಾನಕದಷ್ಟೇ ಸಿರಿಯಾಳನ ಕತೆಯೂ ಇಲ್ಲಿ ಪ್ರಮುಖವಾಗಿದೆ. ಮೂವತ್ತು ಪಾತ್ರಗಳನ್ನು ಮೂರು ಅಂಕಗಳಲ್ಲಿ ರಾಜಕೀಯ ಸ್ಥಿತ್ಯಂತರಗಳನ್ನು ನಾಟಕೀಯ ಪರಿಣಾಮಗಳೊಂದಿಗೆ ದಾಖಲಿಸಿದ್ದಾರೆ. ನಾಟಕವೇ ಆದರೂ ಅದರ ಹಿನ್ನೆಲೆಯಲ್ಲಿಯೇ ಸಾಮಾಜಿಕ, ಧಾರ್ಮಿಕ ಅಂಶಗಳನ್ನು ಚರ್ಚಿಸಲಾಗಿದೆ. ಅಧಿಕಾರಶಾಹಿ, ರಾಜಸತ್ತೆಗಳು ವ್ಯಕ್ತಿಯ ಮೇಲೆ ನಡೆಸುವ ದೌರ್ಜನ್ಯ ದಬ್ಬಾಳಿಕೆಗಳು ಒಂದು ಹಂತದಲ್ಲಿ ಆ ವ್ಯಕ್ತಿಯ ತೇಜೋವಧೆಯೊಂದಿಗೆ ಅಸ್ತಿತ್ವವನ್ನೇ ಅಳಿಸಿಹಾಕುವ ಪ್ರಯತ್ನ ಮಾಡುತ್ತವೆ. ರಾಜನಿಷ್ಠೆ, ದೇಶಪ್ರೇಮಗಳು ವ್ಯಕ್ತಿತ್ವವಿಲ್ಲದ ರಾಜವಂಶೀಯರ ದೃಷ್ಟಿಯಲ್ಲಿ ಮೌಲ್ಯರಹಿತವಾಗಿ ಗೋಚರಿಸುತ್ತವೆ. ಚಾಲುಕ್ಯರ ಸೋಲು ಪಲ್ಲವರ ವಿಜಯ ಘೋಷಗಳೊಂದಿಗೆ ಪ್ರಾರಂಭವಾಗುವ ನಾಟಕ ರಾಜಕೀಯ ಸನ್ನಿವೇಶದ ಸ್ಪಷ್ಟಕಲ್ಪನೆಯನ್ನು ಮೂಡಿಸುತ್ತದೆ. ಸಿರಿಯಾಳ ದಂಡಾಧೀಶನ ಮಾನವೀಯ ಗುಣಗಳು, ಶೌರ್ಯ, ಪರಾಕ್ರಮಗಳು, ಮಹೇಂದ್ರಮರ್ಮನ ಕ್ರೌರ್ಯ, ಅಟ್ಟಹಾಸ, ಉದ್ಧಟತನಗಳು ಹಾಗೆಯೇ ಪರಾಜಿತ ಚಾಲುಕ್ಯ ಸಾಮ್ರಾಜ್ಯದ ಪ್ರಜೆಗಳಲ್ಲಿನ ದೇಶಭಕ್ತಿ, ರಾಜಭಕ್ತಿ, ಆತ್ಮಾಭಿಮಾನ, ಶೌರ್ಯ, ಪರಾಕ್ರಮಗಳು ನೀರನಾಯಕನ ಮಗ ಶಿವನಾಯಕನ ಮೂಲಕ ಬಿಚ್ಚಿಕೊಳ್ಳುತ್ತವೆ. ಶತ್ರುಗಳ ಶೌರ್ಯ, ಸಾಹಸ, ದೇಶಭಕ್ತಿಗಳಿಗಾಗಿ ಮೆಚ್ಚಿಕೊಳ್ಳುವ ದಂಡಾಧೀಶ ಸಿರಿಯಾಳ ಮಹೇಂದ್ರವರ್ಮನಂತಹವನ

ಅರಸೊತ್ತಿಗೆಯಲ್ಲಿ ಇರುವುದು ಸಾಧ್ಯವೇ ಆಗುವುದಿಲ್ಲ. ಅದರಲ್ಲಿಯೂ ಶತ್ರುಪಕ್ಷಕ್ಕೆ ಸೇರಿದ ಶಿವನಾಯಕನ ರಕ್ಷಣೆಗೆ ನಿಂತು ಮಹೇಂದ್ರವರ್ಮನ ಆಕ್ರಮಣ ದೌರ್ಜನ್ಯಗಳನ್ನು ಪ್ರತಿಭಟಿಸಿದ ಕ್ಷಣದಿಂದ ಮಹೇಂದ್ರವರ್ಮ ಸಿರಿಯಾಳರ ಸಂಬಂಧದಲ್ಲಿ ದೊಡ್ಡ ಬಿರುಕು ಏರ್ಪಡುತ್ತದೆ. "ಶತ್ರುವಿಗೆ ಸಹಾಯನಾಗುವುದೇ? ಎಂಬ ಮಹೇಂದ್ರಮರ್ಮನ ಆಕ್ಷೇಪಕ್ಕೆ ಶತ್ರುವಿಗೆ ಸಹಾಯವಲ್ಲ ಇದು. ವೀರಪುತ್ರನ ವೀರಾಲಾಪವನ್ನು ನೋಡಿ ಕೇಳಿ ನಲಿಯುವ ಸೌಭಾಗ್ಯ!"[೧೦] ಎನ್ನುವ ಸಿರಿಯಾಳನ ಮಾತುಗಳು ಆತನ ಗುಣಗ್ರಾಹಿತ್ವ ಗುಣಕ್ಕೆ ಹಿಡಿದ ಕನ್ನಡಿಯಾಗಿದೆ. ಇಲ್ಲಿ ಸಿರಿಯಾಳನ ಭಕ್ತಿ ಪರಿಕ್ಷೆಯೂ ಈ ನಾಟಕದ ಮುಖ್ಯ ವಸ್ತುವಲ್ಲ. ಸಿರಿಯಾಳನ ಭಕ್ತಿ ವ್ರತ ನಿಷ್ಠೆಯನ್ನು ಶಿವನು ಸಿರಿಯಾಳನ ಮಗನಾದ ಚೇಲಾಳನನ್ನೆ ಮಾಂಸವನ್ನಾಗಿ ಊಟಕ್ಕೆ ಬಡಿಸಬೇಕೆಂದು ಬೇಡುತ್ತಾನೆ. ಸಿರಿಯಾಳನು ಶಿವ ಪರೀಕ್ಷೆಯನ್ನು ಗೆಲ್ಲುತ್ತಾನೆ. ಹೀಗೆ ಹಲಾವಾರು ಪರೀಕ್ಷೆಗಳನ್ನು ದಾಟಿ ಬರುವ ಈ ನಾಟಕದ ಸನ್ನಿವೇಶವು ಕೇಂದ್ರವಸ್ತುವಿಗೆ ಸಂಬಂಧಿಸುವಲ್ಲಿ ಇದೊಂದು ಉಪಕತೆಯಾಗಿ ಭಕ್ತಿಭಾವನ್ನು ಮೂಡಿಸುತ್ತದೆ. ಈ ನಾಟಕದಲ್ಲಿ ನಾಡು–ನುಡಿಗಳ ಬಗೆಗಿನ ಅಭಿಮಾನದ ಸಂಭಾಷಣೆಯು ಮೇಳೈಸಿದೆ. ವಿಜಯಾ ಸುಬ್ಬರಾಜ್‌ರವರು ಅಭಿಪ್ರಾಯಪಡುವಂತೆ "ವಾತಾಪಿ ಮತ್ತೆ ವಿಜಗಳಿಸುವುದೇ ಇಡೀ ನಾಟಕದ ಪ್ರಮುಖ ಆಶಯವಾಗಿದೆ. ರಾಜಕೀಯ ಸ್ಥಿತ್ಯಂತರಗಳನ್ನು ಸಮರ್ಪಕ ಸಂವಿಧಾನದ ಮೂಲಕ ದಾಖಲಿಸುವಲ್ಲಿ ಈ ನಾಟಕ ಅತ್ಯಂತ ಯಶಸ್ವಿಯಾಗಿದೆ. ಅನುಭಾವ ರಾಜಭಕ್ತಿಗಳನ್ನು ಎತ್ತಿ ಹಿಡಿಯುವ ಉದ್ದೇಶದ ಹಿನ್ನಲೆ ಈ ನಾಟಕಕ್ಕೆ ಇದೆಯೆಂಬುದು ಸ್ಪಷ್ಟವಾಗಿದೆ". ರಾಜನಾಗಲೀ ಪ್ರಜೆಯಾಗಲೀ ಯಾರೂ ಏನೇ ಆಗಿದ್ದರೂ ತನ್ನ ನಾಡು–ನುಡಿಯ ಬಗೆಗಿನ ಅಭಿಮಾನ ಹಾಗೂ ಅದನ್ನು ಕಾಪಾಡಿಕೊಳ್ಳುವಲ್ಲಿನ ನಿಷ್ಠೆಯು ಅತಿಮುಖ್ಯವಾಗಿದೆ ಎಂದು ಹೇಳುವ ಈ ಮಾತು ಇಂದಿನ ಅಧುನಿಕ ಯುಗದಲ್ಲೂ ವ್ಯಕ್ತಿಯೊಬ್ಬನ ಕರ್ತವ್ಯ ನಿಷ್ಠೆ ಹೇಗಿರಬೇಕೆಂಬುದನ್ನು ಪರಿಚಯ ಮಾಡಿಕೊಡುತ್ತದೆ.

ಕುವೆಂಪುರವರ ಶ್ರೀ ರಾಮಯಣ ದರ್ಶನಂ ಮಹಾಕಾವ್ಯವನ್ನು ಆಧರಿಸಿದ ಕನಕಲಂಕಾಲಕ್ಷ್ಮಿ ನಾಟಕವು ೧೯೫೫ ರಲ್ಲಿ ರಚಿತವಾಗಿದ್ದು ಇದರಲ್ಲಿ ರಾಮಾಯಾಣದ ದೃಶ್ಯಗಳಿಂದ ಕೂಡಿದೆ.

"ರಾವಣ ನಾ ಮನೋನಮನೆ ಸಾತ್ವಿಕತೆಗಿತ್ತಂತಹ ಬೇರೊಂದು ಹೆಸರವಳು. ಅವಳೆ ಅವಳೆ ಅವಳೆ!"[೧೧]

ಅಶೋಕ ವನದ ಸೀತೆಯನ್ನು ಕಂಡು ಮಂಡೋದರಿಯು ಅವಳಿಗೆ ಸಮಾಧಾನ ಮಾತುಗಳನ್ನು ಹೇಳುತ್ತಾ

> "ಆ ಮಂಗಳಂ ನಿನಗೆ ಶೀಘ್ರ ದಿನಕ್ಕೆ!.
> ನಿನ್ನ ಮಂಗಳ ಮನೆಗೆ ಮಂಗಳಂ! ನನ್ನಂತೆ
> ದೇವಿ, ನೀಮಂ ಪ್ರಾರ್ಥಿಸಾ ನನ್ನ ಪತಿಯರ್ದೆಗೆ
> ಶುದ್ದಿ ದೊರೆಕೊಳ್ಳಂತೆ ನಾನಜನೆ ಬೇಡಲ್ಕೆ....
> ............ ನೀನೆ ದರ್ಶನ ವಿತ್ತೆ
> ನುಡಿಸಿದೆ ಕೃತಾಥಳಂ .................
> .............. ನಿನ್ನ ನೋಡಿಯಂ
> ಕಿಡುಗೆನ್ನ ಪತಿಯ ಹೃದಯದ ಪಾಪ ಕಿಟ್ಲಿಷಂ
> ಸನ್ಮತಿಯಂದಿಸಿ ಶಾಂತಿ ಸಂಕುಮಕ್ಕೆ ಸರ್ವರಿಗೆ"[೧೨]

ಮಂಡೋದರಿಯ ಪಾತ್ರವನ್ನು ಕೇಂದ್ರ ಬಿಂಧುವಾಗಿಟ್ಟುಕೊಂಡು ರಾವಣನ ವ್ಯಕ್ತಿತ್ವ ಆವರಿಸಿಕೊಳ್ಳುವಂತೆ ಮರುಳಯ್ಯನವರು ಕುವೆಂಪುರವರ ಶ್ರೀರಾಮಾಯಣ ದರ್ಶನಂ ಆಯ್ದ ಭಾಗಗಳನ್ನು ಜೋಡಿಸಿ ರೂಪಿಸಿದ್ದಾರೆ. ಇಲ್ಲಿ ಸೀತೆಯನ್ನು ಸಾಧ್ವಿಯಾಗಿ ನೋಡಿರುವುದಷ್ಟೆ ಅಲ್ಲದೆ, ಮಂಡೋದರಿಯ ಸೋದರಿ ಪ್ರೇಮ ಸೀತೆಯ ಮೇಲೆ ಮೂಡಿದ್ದು, ಪತಿಯಾದ ರಾವಣನ ದುಷ್ಟ ವ್ಯಕ್ತಿತ್ವವನ್ನು ಬದಲಾಯಿಸಲು ಬಂದ ಮಾತೆಯಂತೆ ಕಂಡು ಬಂದಿದ್ದು ಜಗದ್ದೋದ್ಧಾರಕ ಪರಿವರ್ತನಾ ಅಂಶಗಳು ಗೋಚರಿಸುತ್ತವೆ.

"ಭಾಸನ ರೂಪಾಂತರ ನಾಟಕಗಳು" ಸಾಶಿಮರವರು ಸಂಸ್ಕೃತದಿಂದ ಕನ್ನಡಕ್ಕೆ ರೂಪಾಂತರಿಸಿದ್ದಾರೆ. ಭಾಸನ ಪ್ರತಿಮಾ ನಾಟಕದಲ್ಲಿಯ ಕೈಕೆಯ ವ್ಯಕ್ತಿತ್ವವನ್ನು ಉದಾತ್ತೀಕರಿಸಿದ ಹಿನ್ನೆಲೆಯನ್ನು ವಿಸ್ತರಿಸಿದ ಸ್ವತಂತ್ರ ನಾಟಕವಾಗಿದೆ. "ಇದೊಂದು ಆ ನಾಟಕದ ಗರ್ಭಾಂಕ ಎಂದು ಕರೆಯಬಹುದು. ಇದು ಉತ್ತರ ರಾಮಚರಿತದಲ್ಲಿ ಸೀತೆಯ ಪರಿತ್ಯಕ್ತಳಾದ ಮೇಲೆ ತಾಯಿಯಾದ ಪೃಥ್ವಿಯ ಮಡಿಲಲ್ಲಿದ್ದು ಮುಂದೆ ವಾಲ್ಮೀಕಿಯು ಏರ್ಪಡಿಸಿದ ನಾಟಕದಲ್ಲಿ ಗಮಗೆಯ ಮಡಿಲಿನಿಂದ ಮೇಲೆರಿ ಬಂದ ಗರ್ಭಾಂಕದಂತೆ ಪ್ರತಿಮಾ ನಾಟಕದಲ್ಲಿಯೇ ಗರ್ಭಾಂಕವಾಗಿ ಸೇರಿಸಬಹುದಾದಂಥ ಅಪೂರ್ವ ಕೃತಿಯಾಗಿದೆ"[೧೩] 'ಸ್ವಪ್ನ ನಾಟಕ' ಮತ್ತು 'ಪಂಚರಾತ್ರೆಗಳು' ಕೇವಲ ಅನುವಾದಗಳಾಗದ್ದರಿಂದ ಲೇಖಕರಿಗೆ ತಮ್ಮ ಅನಿಸಿಕೆಗಳನ್ನು ಅವರಲ್ಲಿ ಸೇರಿಸಲು ಹೆಚ್ಚು ಅವಕಾಶವಿಲ್ಲ.

ಸ್ವಪ್ನ ನಾಟಕಕ್ಕೆ ಬರೆದ ವಿಸ್ತಾರವಾದ ಮುನ್ನುಡಿಯಲ್ಲಿ ಭಾಸನ ವಿಷಯವನ್ನು ವಿವರವಾಗಿ ತಿಳಿಸಿದ್ದಾರೆ. ಅಲ್ಲದೆ ಸ್ವಪ್ನ ನಾಟಕದ ಸರಳವಾದ ಭಾವಾನುವಾದವನ್ನು ತಿಳಿಸಿದ್ದಾರೆ. ಪರಾಭವ ಎಂಬ ನಾಟಕದ ಹೆಸರು ಎರಡು ದೃಷ್ಟಿಯಿಂದ ಅರ್ಥಪೂರ್ಣವಾಗಿದೆ. ಶ್ರೀರಾಮನ ಪಟ್ಟಾಭಿಷೇಕದ ವಾರ್ತೆಯನ್ನು ತಂದ ಮಂಥರೆಯು ಭರತನನ್ನು ಪಟ್ಟಕ್ಕೆ ಕೂಡಿಸು ಮತ್ತು ಶ್ರೀರಾಮನನ್ನು ವನಕ್ಕೆ ಅಟ್ಟು ಎಂಬ ಎರಡು ವಚನಗಳನ್ನು ಕೇಳಿಕೊ ಎಂದು ಎಷ್ಟು ಹೇಳಿದರೂ ಕೈಕೇಯಿಯು ಒಪ್ಪುವುದಿಲ್ಲ. ಆದರೆ ವನಿಷ್ಠ ಮತ್ತು ಸುಮಂತ್ರರು ಬಂದು ದಶರಥನಿಗೆ ಬಂದ ಶಾಪದ ವಿಷಯವನ್ನು ತಿಳಿಸಿ ಶ್ರೀರಾಮನ ಪ್ರಾಣ ರಕ್ಷಣೆಗಾಗಿ ಕೈಕೇಯಿಯು ಅವನನ್ನು ವನಕ್ಕೆ ಕಳಿಸುವ ವಚನವನ್ನು ಕೇಳ ಬೇಕು ಎಂದು ಸೂಚಿಸುತ್ತಾರೆ. ಆದರೆ ಇಂಥ ವಚನವನ್ನು ಬೇಡುವುದಿಲ್ಲ ಎಂಬ ತನ್ನ ದೃಢ ನಿರ್ಧಾರವನ್ನು ಬಿಡುವ ಸೋಲನ್ನು ಒಪ್ಪಿಕೊಳ್ಳಲಾಗುವುದು. ಇದೇ ಅವಳ ಪರಾವ ಅಂದರೆ ಸೋಲು, ತನ್ನ ಮನಸ್ಸಿಗೆ ವಿರುದ್ಧವಾದುದನ್ನು ಮಾಡುವಂಥ ಪರಾಭವ, ಲೋಕದ ದೃಷ್ಟಿಯಲ್ಲಿ ಕೆಟ್ಟವಳಾಗಿ ರಾಮನ ಪ್ರಾಣವನ್ನು ರಕ್ಷಿಸಲು ಅವಳು ಒಪ್ಪಿಕೊಂಡ ಪರಾಭವ' ಅವಳ ನೈತಿಕ ವಿಜಯವೇ ಆಗಿದೆ. ಹೀಗೆ ತನ್ನ ಮನಸ್ಸಿಗೆ ಒಪ್ಪದ ಕಾರ್ಯವನ್ನು ಮಾಡಿದ್ದು, ದಶರಥನನ್ನು ಶಾಪವಿಮುಕ್ತಗೊಳಿಸಲು ಹಾಗೂ ರಾಮನ ಪ್ರಾಣ ರಕ್ಷಣೆಗಾಗಿ ನಿಂತ ಕೈಕೆಯ ಮನೋಭಿಲಾಷೆಯ ಮುಖ್ಯವಾಗಿ ಕಂಡು ಬರುತ್ತದೆ.

ಹೀಗೆ ಸಾ. ಶಿ. ಮರವರ ನಾಟಕಗಳು ಸಾಮಾಜಿಕ ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ ನೆಲೆಗಳಲ್ಲಿ ವಸ್ತುಸ್ಥಿತಿಯು ಸಮಕಾಲೀನ ಸಂದರ್ಭದ ಹಾಗೂ ಹೋಗುಗಳು ಸಮಾಜಕ್ಕೆ ಉತ್ತಮವಾದ ಸಂದೇಶವನ್ನು ನೀಡುವಲ್ಲಿ ಯಶಸ್ವಿಯಾಗಿವೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ, ಉಳಿಯ ಪೆಟ್ಟನ್ನು ಪದೇ ಪದೇ ತಿಂದ ಕಲ್ಲು ಮಾತ್ರ ದೇವರ ವಿಗ್ರಹವಾಗಿ ಪೂಜಿಸಲ್ಪಡುತ್ತದೆ. ಅದೇ ರೀತಿಯಲ್ಲಿ. ಲೌಕಿಕ ಜೀವನದಲ್ಲಿ ಸಂಸಾರ ಬಂಧನಕ್ಕೆ ಸಿಲುಕಿ ಒದ್ದಾಡುತ್ತಿರುವಂಥವರಿಗೆ ಉತ್ತಮರ ಮಹಾತ್ಮರ ಯೋಗ್ಯ ವ್ಯಕ್ತಿತ್ವವುಳ್ಳವರ ಬೋಧನೆಯು ನಿರಂತರವಾಗಿದ್ದಲ್ಲಿ ಅವರ ಬದುಕು ಸಾರ್ಥಕವಾಗುತ್ತದೆ. ಇಂಥಹ ಸಾಧನೆಯ ಹಾದಿಯಲ್ಲಿ ಯಶಸ್ವಿಯಾಗಬೇಕಾದರೆ ಮಹಾನುಭಾವರ ಜೀವನಾದರ್ಶವನ್ನೂ, ಸಾಹಿತ್ಯಾರಾಧಕರ ವಿಚಾರಗಳಿಂದ ಮಾತ್ರ ಸಾಕ್ಷ್ಯ ಆಗ ಸುಂದರ

ಸಮಾಜ ನಿರ್ಮಾಣವಾಗುತ್ತದೆ. ಹಾಗೆಯೇ ನಾವು ಸದಾ ಓದಿ ಬರೆಯುವ ವೈಚಾರಿಕವಾಗಿ ಚಿಂತಿಸುವ, ಚರ್ಚಿಸುವ ಪ್ರವೃತ್ತಿಯನ್ನು ರೂಢಿಸಿಕೊಳ್ಳಬೇಕು. ಆಗ ಮಾತ್ರ ನಾಡಿನ ಸಾಹಿತ್ಯ ಸಂಸ್ಕೃತಿ ಬೆಳೆಯುವುದರ ಜೊತೆಗೆ ದೇಶ ಭಾಷೆಯೂ ಕೂಡಾ ಸಮೃದ್ಧವಾಗಿ ಬೆಳೆಯುತ್ತಲೇ ಇರುತ್ತದೆ.

**ಅಡಿ ಟಿಪ್ಪಣಿಗಳು**

1. ಲಕ್ಕಪ್ಪಗೌಡ ಹೆಚ್. ಜೆ. (ಸಂ), ೨೦೦೧, ಅಭಿಜ್ಞ, ಸಾ. ಶಿ. ಮರುಳಯ್ಯ ಅಭಿನಂದನ ಸಮಿತಿ, ಬೆಂಗಳೂರು, ಪುಟ ೮೧೯.
2. ವಾಗೀಶ ಎಂ. ಆರ್. ಸಾ.ಶಿ. ಮರುಳಯ್ಯನವರ ಸಮಗ್ರ ಸಾಹಿತ್ಯ ಒಂದು ಅಧ್ಯಯನ (ಅಪ್ರಕಟಿತ) ೨೦೧೨ ಪುಟ ೨೩೩
3. ಸುವರ್ಣ ಸಂದರ್ಶನದಲ್ಲಿ
4. ಮರುಳಯ್ಯ ಸಾ.ಶಿ. ಸಾ.ಶಿ.ಮ. ಸಮಗ್ರಕಾವ್ಯ ಸ್ವಪ್ನ ಬುಕ್‌ಹೌಸ್, ಬೆಂಗಳೂರು, ಪುಟ ೧೪೫
5. ಅದೇ ಪುಟ ೨೩೫
6. ಅದೇ ಪುಟ ೨೩೫
7. ಅದೇ ಪುಟ ೨೧೯
8. ಅದೇ ಪುಟ ೨೧೯
9. ಮರುಳಯ್ಯ ಸಾ.ಶಿ. ೨೦೦೫, ಕನಕಲಂಕಾಲಕ್ಷ್ಮಿ, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ಪುಟ ೪/೫
10. ನಾರಾಯಣ ಪಿ.ವಿ (ಸಂ) ೨೦೦೨, ಇಷಾಂಶು, ಸಾಶಿಮ ಅಭಿನಂದನ ಸಮತಿ, ಬೆಂಗಳೂರು, ಪುಟ ೧೭೦
11. ಮರುಳಯ್ಯ ಸಾ.ಶಿ. ೨೦೦೫, ಕನಕಲಂಕಾಲಕ್ಷ್ಮಿ, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ಪುಟ ೧೨–೧೩
12. ನಾರಾಯಣ ಪಿ.ವಿ (ಸಂ) ೨೦೦೨, ಇಷಾಂಶು, ಸಾಶಿಮ ಅಭಿನಂದನ ಸಮತಿ, ಬೆಂಗಳೂರು, ಪುಟ ೧೭೦
13. ಮರುಳಯ್ಯ ಸಾ.ಶಿ. ಸಾ.ಶಿ.ಮ. ಸಮಗ್ರಕಾವ್ಯ ಸ್ವಪ್ನ ಬುಕ್‌ಹೌಸ್, ಬೆಂಗಳೂರು, ಪುಟ ೧೪೫
14. ಮರುಳಯ್ಯ ಸಾ.ಶಿ. ೨೦೦೫, ಕನಕಲಂಕಾಲಕ್ಷ್ಮಿ, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ಪುಟ ೪/೫
15. ಲಕ್ಕಪ್ಪಗೌಡ ಹೆಚ್. ಜೆ. (ಸಂ), ೨೦೦೧, ಅಭಿಜ್ಞ, ಸಾ. ಶಿ. ಮರುಳಯ್ಯ ಅಭಿನಂದನ ಸಮಿತಿ, ಬೆಂಗಳೂರು, ಪುಟ ೮೧೯.
16. ವಾಗೀಶ ಎಂ. ಆರ್. ಸಾ.ಶಿ. ಮರುಳಯ್ಯನವರ ಸಮಗ್ರ ಸಾಹಿತ್ಯ ಒಂದು ಅಧ್ಯಯನ (ಅಪ್ರಕಟಿತ) ೨೦೧೨ ಪುಟ ೨೩೩
17. ವೀರಮ್ಮ ೨೦೦೮, ಕನ್ನಡ ಮಹಿಳಾ ಸಾಹಿತ್ಯದಲ್ಲಿ ವೈಚಾರಿಕತೆ (ಅಪ್ರಕಟಿತ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
18. ಶಾಂತಿನಾಥ ದಿಬ್ಬದ ಮತ್ತು ೨೦೦೫, ಬಸವರಾಜ ಸಬರದ (ಸಂ) ವೈಚಾರಿಕ ಲೇಖನಗಳು, ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ
19. ಸುಶೀಲ ಎನ್ ೨೦೦೫, ಕುವೆಂಪು ನಾಟಕಗಳು ಗುರು ಗುರಿ, ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೂರು